6. ಪ್ರಕಟಣೆ:

ಉಪಾಧ್ಯಕ್ಷರು :- ಬೆಳಗಾವಿ ನಗರಕ್ಕೆ ಹತ್ತಿರವಿರುವ (7 ಕಿಲೋಮೀಟರ್) ಜಾಪರವಾಡಿ ಗ್ರಾಮವನ್ನು ಮಾದರಿ ಗ್ರಾಮವಾಗಿ ಅಭಿವೃದ್ಧಿಪಡಿಸಲಾಗಿದ್ದು ಈ ಗ್ರಾಮಕ್ಕೆ ಭೇಟಿ ನೀಡಲು ಅನುಕೂಲವಾಗುವಂತೆ ಮಾನ್ಯ ಶಾಸಕರಿಗೆ ಅಕ್ಕಮಹಾದೇವಿ ವಸತಿಗೃಹ, ಶಾಸಕರ ಭವನದಿಂದ ದಿನಾಂಕ : 23-01-2009 ರಂದು ಬೆಳಿಗ್ಗೆ 8 ಗಂಟೆಗೆ ವೋಲ್ವೋ ಬಸ್ಸುಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಮಾನ್ಯ ಶಾಸಕರುಗಳು ಈ ಅವಕಾಶವನ್ನು ಉಪಯೋಗಿಸುವಂತೆ ಮಾನ್ಯ ಮುಖ್ಯಮಂತ್ರಿಯವರು ವಿನಂತಿಸಿರುತ್ತಾರೆ. ಈಗ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ.

7. ನಿಯಮ 69ರ ಮೇರೆಗೆ ನಡೆದ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಹಾಗೂ ಸ್ಪಷ್ಟೀಕರಣ

ಡಾ॥ ಬಿ.ಎಸ್. ಯಡಿಯೂರಪ್ಪ, (ಮುಖ್ಯಮಂತ್ರಿಯವರು) :- ಮಾನ್ಯ ಉಪಾಧ್ಯಕ್ಷರೆ, ನಿನ್ನೆ ಸುದೀರ್ಘವಾಗಿ ವಿಧಾನಪರಿಷತ್ತಿನಲ್ಲಿ ಈ ಅಕ್ರಮ ಗಣಿಗಾರಿಕೆಯ ಬಗ್ಗೆ ಎಲ್ಲಾ ವಿವರವನ್ನು ತಿಳಿಸುವ ಪ್ರಯತ್ನ ಮಾಡಿದ್ದೇನೆ. ಯಾರ್ಯಾರ ಕಾಲದಲ್ಲಿ ಗಣಿಗಾರಿಕೆಗೆ ಏನೇನು ಅನುಮತಿಯನ್ನು ಕೊಟ್ಟಿದ್ದರು ಆ ಪಟ್ಟಿಯನ್ನು ಪ್ರಕಟ ಮಾಡಬೇಕೆಂದು ಒತ್ತಾಯ ಮಾಡಿದ ಮೇಲೆ ಸದನದ ಮುಂದೆ ಇಟ್ಟಿದ್ದೆ. ಕೆಲವರ ಹೆಸರು ಹೇಳಿದಾಗ ಉಳಿದವರ ವಿವರ ಬೇಕು ಎಂದು ಹೇಳಿದರು. ನಾನು ಅಲ್ಲಿ ವಿನಂತಿ ಮಾಡಿ ಅವರು ಒಪ್ಪಿದ್ದಾರೆ ಜಂಟಿ ಸದನದ ಸಮಿತಿಯನ್ನು ಮಾಡಿ, ಧರ್ಮಸಿಂಗ್‌ರವರಿದ್ದಾಗ 43 ಗಣಿಗಾರಿಕೆ ಅನುಮತಿ 2973.72 ಹೆಕ್ಟೇರ್‌ಗೆ, ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ 44 ಗಣಿಗಾರಿಕೆ ಅನುಮತಿ 3524.77 ಹೆಕ್ಟೇರ್‌ಗೆ, ರಾಜ್ಯಪಾಲರ ಅವಧಿಯಲ್ಲಿ 22 ಗಣಿಗಾರಿಕೆ ಅನುಮತಿ 808.43 ಹೆಕ್ಟೇರ್, ಒಟ್ಟು 109 ಕೇಸಿನ ಬಗ್ಗೆ..

ಶ್ರೀ ಹೆಚ್.ಡಿ. ರೇವಣ್ಣ :- ರಾಜ್ಯಪಾಲರು ಅದರಲ್ಲಿ ಏನು..

ಡಾ॥ ಬಿಎಸ್. ಯಡಿಯೂರಪ್ಪ :- ಆ ಎಲ್ಲಾ ಫೈಲ್ ನಿಮ್ಮ ಮನೆಯಲ್ಲೆ ಇದೆಯಲ್ಲ ನನ್ನನ್ನೇನು ಕೇಳುತ್ತೀರಿ?

ಶ್ರೀ ಹೆಚ್.ಡಿ. ರೇವಣ್ಣ :- ನಮ್ಮ ಹತ್ತಿರ ಆ ಫೈಲ್ ಇದ್ದರೆ ತಮಗೆ ಕಳುಹಿಸುತ್ತೇನೆ.

ಡಾ॥ ಬಿ.ಎಸ್. ಯಡಿಯೂರಪ್ಪ :- ನಾನು ನೀವು ಏನು ಕೇಳುತ್ತೀರಿ ಅದೆಲ್ಲದರ ವಿವರವನ್ನು ಕೊಡುತ್ತೇನೆ. ಈ ವಿವರವನ್ನು ನಾನು ಒದಗಿಸಿದ್ದೆ. ಮಾನ್ಯ ಹಿರಿಯ ನಾಯಕರು ಮತ್ತು ಅಧಿಕಾರದಲ್ಲಿ ಇದ್ದು ಅನುಭವ ಹೊಂದಿರುವ ಮಲ್ಲಿಕಾರ್ಜುನ ಖರ್ಗೆಯವರಿಗೆ ಒಂದು ಮಾತನ್ನು ನೆನಪು ಮಾಡುತ್ತೇನೆ. ನಾನು ಅವರನ್ನು ಚುಚ್ಚಬೇಕೆಂದಿಲ್ಲ. ಏಕೆಂದರೆ ಅವರು ನಮ್ಮೆಲ್ಲರಿಗಿಂತ ಹಿರಿಯರು.

ನಮಗೆ ಮಾರ್ಗದರ್ಶನ ಮಾಡುತ್ತಾರೆಂದು ನಾನು ಅಂದುಕೊಂಡಿದ್ದೆ. ಈ ದೇಶ ಕಂಡಂತಹ, ಆರ್ಥಿಕ ಪರಿಸ್ಥಿತಿಯನ್ನೇ ಬುಡಮೇಲು ಮಾಡಿದಂತಹ ಛಾಪಾ ಕಾಗದ ಹಗರಣವನ್ನು ಪ್ರಾಣದ ಹಂಗು ತೊರೆದು ಪ್ರಸ್ತಾಪಿಸಿದವನು ಈ ಯಡಿಯೂರಪ್ಪ. ಆ ಸಂದರ್ಭದಲ್ಲಿ ನೂರು ಬಾರಿ ಎಲ್ಲಾ ದಾಖಲಾತಿಗಳೊಂದಿಗೆ ಸಿ.ಬಿ.ಐ. ತನಿಖೆಗೆ ವಹಿಸಬೇಕೆಂದು ಹೇಳಿದಾಗ, ಸಿ.ಬಿ.ಐ. ಬಗ್ಗೆ ನಮಗೆ ವಿಶ್ವಾಸವಿಲ್ಲ, ಇದು ಸಾಧ್ಯವಿಲ್ಲವೆಂದು ಸಿ.ಬಿ.ಐ.ಗೆ ವಹಿಸಲಿಲ್ಲ. ಆವತ್ತು ಕೇಂದ್ರದಲ್ಲಿ NDA ಸರ್ಕಾರವಿತ್ತು. ಅದರಲ್ಲಿ ನಂಬಿಕೆ ಇಲ್ಲ ಎನ್ನುವಂತಹ ಮಾತನ್ನು ಅಂದಿನ ಗೃಹ ಸಚಿವರಾಗಿದ್ದಂತಹ ಖರ್ಗೆಯವರು ಹೇಳಿದ್ದರು. ಆದರೆ ಮಹಾರಾಷ್ಟ್ರ ಸರ್ಕಾರ ಅದನ್ನು ಸಿ.ಬಿ.ಐ.ಗೆ ಒಪ್ಪಿಸಿತು. ಏನೆಲ್ಲಾ ಅನಾಹುತಗಳಾಯಿತು? ಇವರು ಸಿ.ಬಿ.ಐ.ಗೆ ವಹಿಸದೇ ಇದ್ದುದರಿಂದ, ಸೆಂಟ್ರಲ್ ಜೈಲಿನಲ್ಲೇ ಇದ್ದುಕೊಂಡು ಅವನು ಹೇಗೆ ನಕಲಿ ಛಾಪಾ ಕಾಗದ ಹಗರಣವನ್ನು ಮುಂದುವರೆಸಿಕೊಂಡು ಹೋದ, ಯಾವ್ಯಾವ ಅಧಿಕಾರಿಗಳು, ಯಾವ್ಯಾವ ರಾಜಕಾರಣಿಗಳು, ಯಾವ್ಯಾವ ಮಂತ್ರಿಗಳು ಸೆಂಟ್ರಲ್ ಜೈಲಿಗೆ ಹೋಗಿ ಅವನನ್ನು ಭೇಟಿ ಮಾಡುತ್ತಿದ್ದರು, ಆ ಡೈರಿ ಸಿಕ್ಕಿದೆ, ವಿವರ ಸಿಕ್ಕಿದೆ, ಅದು ಇಡೀ ಜಗತ್ತಿಗೆ ಗೊತ್ತಾಗಿದೆ, ನಾಡಿನ ಜನತೆಗೆ ಗೊತ್ತಿದೆ. ಅವತ್ತು ಗೃಹ ಸಚಿವರಾಗಿದ್ದಂತಹ ಖರ್ಗೆಯವರಿಗೆ ಸಿ.ಬಿ.ಐ. ಮೇಲೆ ವಿಶ್ವಾಸವಿರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ...

ಡಾ॥ ಬಿ.ಎಸ್. ಯಡಿಯೂರಪ್ಪ :- ಒಂದು ಶಬ್ದವನ್ನೂ ಸಹ ನಾನು ವ್ಯತ್ಯಾಸ ಮಾಡಿ ಹೇಳಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನೀವು ಮಾಡಿಲ್ಲ, ನಾನು ಹೇಳುತ್ತೇನೆ.

ಡಾ॥ ಬಿ.ಎಸ್. ಯಡಿಯೂರಪ್ಪ :- ನಾನು ನಿಮ್ಮನ್ನು Hit and run ಮಾಡಿಬಿಡುತ್ತೀರಿ ಎಂದು ಹೇಳುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನೇನೂ ಹೆದರುವುದಿಲ್ಲ. ಏಕೆಂದರೆ, ಅಷ್ಟೇ ಜೋರಾಗಿ ಓಡುವುದಕ್ಕೆ ನನಗೂ ಬರುತ್ತದೆ. ನಿಮಗೂ ಒಂದು ಕಾಲ ಬರುತ್ತದೆ. ಆ ವಿಚಾರ ಬೇರೆ. ತಾವು ಹೇಳತಕ್ಕಂಥದ್ದು irrelevant. ಆ ಕಾಲದಲ್ಲಿ ನಾವು ಏಕೆ refuse ಮಾಡಿದ್ದೆವು ಎಂದರೆ, ಈ ಮಾತನ್ನು ಅಂದಿನ NDA ಸರ್ಕಾರದಲ್ಲಿ ಅಂದು Finance Minister ಆಗಿದ್ದಂತಹ ಶ್ರೀ ಜಸ್ವಂತ್ ಸಿಂಗ್‌ರವರೇ ಸ್ಪಷ್ಟವಾಗಿ ಹೇಳಿದ್ದರು. ಕರ್ನಾಟಕ ಸರ್ಕಾರದವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ಅವರು ಅದನ್ನು ಮಾಡಬೇಕು, ಇಲ್ಲಿ ನಾವು ಅದನ್ನು ತೆಗೆದುಕೊಳ್ಳತಕ್ಕ ಅವಶ್ಯಕತೆ ಇಲ್ಲ, ಅದಕ್ಕಾಗಿ ನಾವು ಅವರಿಗೆ allow ಮಾಡಿದ್ದೇವೆ, they should continue ಎಂದು ನಮಗೆ ಅಂದಿನ Home Minister and Finance Ministerರವರು ಶಹಭಾಷ್‌ಗಿರಿ ಕೊಟ್ಟಿದ್ದರು. ನೀವು ಏನನ್ನೋ ತೆಗೆದುಕೊಂಡು ಇದಕ್ಕೆ ಲಿಂಕ್ ಮಾಡಿದರೆ ಹೇಗೆ? ನಾವು ಇದರ ಬಗ್ಗೆಯೂ ಹೇಳಬೇಕಾಗುತ್ತದೆ, ಮತ್ತೆ ಮುಂದೆಯೂ ಹೇಳಬೇಕಾಗುತ್ತದೆ.

ಡಾ॥ ಬಿ.ಎಸ್. ಯಡಿಯೂರಪ್ಪ :- ನಾನು ನಿಮ್ಮ ಮೇಲೆ ಏನನ್ನೂ ಆಪಾದನೆ ಮಾಡಲಿಲ್ಲ. ನಾನು ಒಂದೇ ಒಂದು ಮಾತನ್ನು ಹೇಳಿದೆ. ನಿಮ್ಮ ಆವತ್ತಿನ ಹೇಳಿಕೆ, proceedings ಎಲ್ಲಾ ನನ್ನ ಬಳಿ ಇದೆ. ಹತ್ತು ಬಾರಿ ಸಿ.ಬಿ.ಐ. ಬಗ್ಗೆ ನಮಗೆ ವಿಶ್ವಾಸವಿಲ್ಲವೆಂದು ಹೇಳಿದ್ದೀರಿ. ಸಿ.ಬಿ.ಐ. ಏನು ಮಾಡಿದೆ ಎಂದು ಅನೇಕ ಘಟನಾವಳಿಗಳನ್ನು ಉದಾಹರಣೆ ಕೊಟ್ಟು, ಅಂದು ನೀವು ಗೃಹ ಸಚಿವರಾಗಿ ಸಿ.ಬಿ.ಐ.ಗೆ ವಹಿಸಲಿಲ್ಲ ಎಂಬುದನ್ನು ನಾನು ನಿಮಗೆ ನೆನಪು ಮಾಡಿಕೊಡುತ್ತಿದ್ದೇನೆ. ಎರಡನೆಯದಾಗಿ, ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿದ್ದ ಲೋಕಾಯುಕ್ತರ ಬಗ್ಗೆ ಈ ನಾಡಿನ ಐದೂವರೆ ಕೋಟಿ ಜನರಿಗೆ ಗೌರವವಿದೆ. ನಮಗೂ ಗೌರವವಿದೆ. ಅವರೇನು ಹೇಳಿದ್ದಾರೆ, ನಮಗೆ ಅನುಕೂಲಕರವಾದುದನ್ನು ಓದುವುದಲ್ಲ. ಬಹಳ ಸ್ಪಷ್ಟವಾಗಿ Page 101 Part -Iನಲ್ಲಿ ಹೇಳಿದ್ದಾರೆ.

"This report is made part of Annexure-A. He has also given some findings. In this report of mine, I am not inclined to endorse those findings of Dr.Singh solely because the dispute is in the nature of interstate dispute and no

conclusion could be arrived at without hearing the State of Andhra Pradesh. This dispute does not confine itself to a dispute between a few companies but involves the territorial integrity of two states. I was informed that there is a litigation pending in the Supreme Court. But in spite of my best efforts, I have not been able to get the particulars of the same; consequently I am unable to comment on the same. But, I do see an urgent need to the Government of Karnataka to approach the Government of India and get a joint survey done to determine the property of two states, so that the territorial integrity of two states are protected."

ನಾವು ನಮ್ಮ ಸರ್ಕಾರ ಬಂದ ಮೇಲೆ, ಎರಡು ಬಾರಿ ಕೇಂದ್ರಕ್ಕೆ joint survey ಆಗಬೇಕೆಂದು ಪತ್ರ ಬರೆದಿದ್ದೇವೆ. ಆಂಧ್ರ ನಮ್ಮದು ಎಂದು ಹೇಳಬಹುದು, ಕರ್ನಾಟಕ ನಮ್ಮದು ಎಂದು ಹೇಳಬಹುದು. ಕೇಂದ್ರ ಸರ್ಕಾರವೇ ಈ ರೀತಿ, ನೀವೇ ಹೇಳಿದ ಪ್ರಕಾರ ಸಾವಿರಾರು ಕೋಟಿ ರೂಪಾಯಿಗಳನ್ನು ಯಾರೇ ಲೂಟಿ ಮಾಡುತ್ತಿರಲಿ, ಅದು ನಿಲ್ಲಬೇಕೆಂದಿದ್ದರೆ, ಅವರ ಬಾರ್ಡರ್ ಯಾವುದು? ನಮ್ಮ ಬಾರ್ಡರ್ ಯಾವುದು? ಆಂಧ್ರ ಒಪ್ಪುವುದಿಲ್ಲ, ಕರ್ನಾಟಕ ಒಪ್ಪುವುದಿಲ್ಲ ಎನ್ನುವುದಕ್ಕಿಂತ, ಕೇಂದ್ರವೇ ಮಧ್ಯಪ್ರವೇಶ ಮಾಡಿ ಮಾಡಬೇಕೆಂದು ಪತ್ರದ ಮೇಲೆ ಪತ್ರಗಳನ್ನು ಬರೆದರೆ, ಕೇಂದ್ರ ಸರ್ಕಾರ ಕೈಕಟ್ಟಿ ಕುಳಿತಿರುವುದಕ್ಕೆ ಕಾರಣವೇನು? ನಾನು ಅತ್ಯಂತ ವಿನಯದಿಂದ, ಯಾವುದೇ ಸಂದರ್ಭದಲ್ಲಿ ನೀವು ನಮ್ಮ ಜೊತೆಗೆ ನಿಯೋಗದಲ್ಲಿ ಬರಲಿಲ್ಲ, ನಾನು ಅದರ ಬಗ್ಗೆ ಚಿಂತೆ ಮಾಡುವುದಿಲ್ಲ, ಕೊನೆಯ ಪಕ್ಷ ಇವತ್ತೇನು ಈ ಐತಿಹಾಸಿಕ ಬೆಳಗಾವಿ ಅಧಿವೇಶನದಲ್ಲಿ, ಉತ್ತರ ಕರ್ನಾಟಕದ

ಸಮಗ್ರ ಅಭಿವೃದ್ಧಿ ಬಗ್ಗೆ ಏನು ಚರ್ಚೆಯಾಗಬೇಕಾಗಿತ್ತೋ, ಈ ಭಾಗದ ಜನ, ಅಪರೂಪಕ್ಕೆ ನಡೆಯುತ್ತಿರುವಂತಹ ಈ ಅಧಿವೇಶನದಲ್ಲಿ ನ್ಯಾಯ ಸಿಗಬಹುದು, ಸಮಸ್ಯೆಗಳಿಗೆ ಪರಿಹಾರ ಸಿಗಬಹುದೆಂದು ಕಾತುರರಾಗಿ ಕಾಯುತ್ತಿರುವಾಗ, ಒಂದೆರಡು ಗಂಟೆ ಮಾತ್ರವೇ ಚರ್ಚೆಯಾಗಬೇಕಾಗಿದ್ದ, ಇದು ಮುಖ್ಯ ಅಲ್ಲವೆಂದು ನಾನು ಹೇಳುವುದಿಲ್ಲ, ಎರಡೂ ಮನೆಯಲ್ಲಿ ಚರ್ಚೆಯಾಯಿತು. ನಾನು ಈಗ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಧಿವೇಶನ 24ಕ್ಕೆ ಮುಗಿಯುತ್ತದೆ. ನೀವು ಹೇಳಿದ ದಿವಸ ನಾನು ನಿಮ್ಮ ಜೊತೆಗೆ ಬರುತ್ತೇನೆ. ಮಾನ್ಯ ಪ್ರಧಾನಿಯವರನ್ನು ಭೇಟಿ ಮಾಡೋಣ. 24 ಗಂಟೆಯೊಳಗಾಗಿ joint surveyಗೆ ಕಳುಹಿಸಬೇಕು, ಯಾರದ್ದು ಏನು ಎನ್ನುವ ಬಣ್ಣ ಬಯಲಾಗಬೇಕು, ಕೇಂದ್ರ ಸರ್ಕಾರ ನಮ್ಮದು ಇದ್ದಿದ್ದರೆ, ಯಡಿಯೂರಪ್ಪನವರೆ, ಏಕೆ ಮಾಡಿಸಲಿಲ್ಲವೆಂದು ಕೇಳುತ್ತಿದ್ದಿರಿ. ಅಂಥದಲ್ಲಿ ನಿಮ್ಮದೇ ಸರ್ಕಾರವಿದೆ, ದೆಹಲಿಯಲ್ಲಿ ನಿಮ್ಮದೇ ಸರ್ಕಾರವಿದೆ. Joint survey ಮಾಡಿಸಿ. ಇದಕ್ಕೊಂದು ಪರಿಹಾರ ಹುಡುಕುವುದಕ್ಕೆ ನಾವು ಸಿದ್ಧರಿದ್ದೇವೆ. ನ್ಯಾಯಕ್ಕೆ ಎಲ್ಲರೂ ಬದ್ಧರಾಗಿದ್ದೇವೆ. ಯಾರು ಈ ನಾಡಿನ ಸಂಪತ್ತನ್ನು ಲೂಟಿ ಮಾಡುವುದಕ್ಕೆ ಬಿಡಬಾರದು. ಅದರಲ್ಲಿ ಎರಡು ಮಾತಿಲ್ಲ. ನಾನು ನಿಮ್ಮನ್ನು ಕೇಳುತ್ತೇನೆ. ಇಷ್ಟೆಲ್ಲಾ ಆದಾಗ, ನಿಮ್ಮ ಪ್ರಕಾರ ಇದು ಯಾವಾಗ ಶುರುವಾಯಿತು? ಮಾನ್ಯ ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಇತ್ತು, ಮಾನ್ಯ ಯಡಿಯೂರಪ್ಪ ಮತ್ತು ಮಾನ್ಯ ಕುಮಾರಸ್ವಾಮಿ ಸಮ್ಮಿಶ್ರ ಸರ್ಕಾರವಿದ್ದಾಗ ಇತ್ತು. ಆಗ ಏಕೆ ಕೇಂದ್ರ ಮಧ್ಯೆ ಪ್ರವೇಶ ಮಾಡಲಿಲ್ಲ? ಏಕೆ joint survey ಆಗಲಿಲ್ಲ? ಏಕೆ ನೀವು ಇವತ್ತು ಮಾತನಾಡುತ್ತೀರಿ? ಈ ಮಾತುಗಳನ್ನು ಆವತ್ತು ಏಕೆ ಮಾತನಾಡಲಿಲ್ಲ? ಏಕೆ ಆವತ್ತು ಸುಮ್ಮನಿದ್ದಿರಿ? ಈ ಪ್ರಶ್ನೆಗಳಿಗೆ, ಈ ಸಂಶಯಗಳಿಗೆ ಜನಕ್ಕೆ ನೀವು ಉತ್ತರವನ್ನು ಕೊಡಬೇಕಾಗುತ್ತದೆ. ಮೂರನೆಯದಾಗಿ, ಈ ದೇಶದ ಇತಿಹಾಸದಲ್ಲಿ ಎದೆ ತಟ್ಟಿ ಹೇಳುತ್ತೇನೆ, ಪ್ರಜಾವಾಣಿಯಲ್ಲಿ cartoon ತೋರಿಸಿ ಹೇಳಿದ್ದಾರೆ, ನಿಜ. ಯಾರು ಸ್ವಾಮಿ? ಈ ದೇಶದಲ್ಲಿ ಖನಿಜ ಸಂಪತ್ತು ಬರೇ ಕರ್ನಾಟಕದಲ್ಲಿ ಮಾತ್ರವಲ್ಲ, ಎಲ್ಲಾ ಕಡೆಯೂ ಈ ರೀತಿ ಲೂಟಿ ನಡೆಯುತ್ತಿದೆ, ರಾಜ್ಯ ಸರ್ಕಾರಕ್ಕೆ ಬರಬೇಕಾದ ತೆರಿಗೆ ಬರುತ್ತಿಲ್ಲ, ರಾಯಲ್ಟಿ ಒಂದು nominal ಆಗಿ fix ಮಾಡಿದ್ದಾರೆ. ಯಾರೋ ಕೋಟ್ಯಾಧಿಪತಿಗಳು ಆಗುವುದಕ್ಕೆ ಅವಕಾಶ ಕೊಟ್ಟಿರುವುದು ಕೇಂದ್ರ ಸರ್ಕಾರ ತಾನೇ? ರಾಯಲ್ಟಿ 10% ಹೆಚ್ಚಿಗೆ ಹಾಕಿದರೆ 70-80 ಕೋಟಿ ರೂ.ಗಳ ಬದಲು 700-800 ಕೋಟಿ ರೂ.ಗಳ ಆದಾಯ ಬರುತ್ತದೆಂದು ನಾನೇ ಮಾನ್ಯ ಚಿದಂಬರಂ ಅವರಿಗೆ

3-4 ಸಲ ಪತ್ರ ಬರೆದೆ. ರಾಯಲ್ಟಿ ಜಾಸ್ತಿ ಮಾಡಲಿಲ್ಲ. Joint survey ಮಾಡುವುದಕ್ಕೆ ready ಇಲ್ಲ. ಗೌರವಾನ್ವಿತ ಸದಸ್ಯರು ಪಕ್ಷಬೇಧ ಮರೆತು ನನ್ನ ಬಗ್ಗೆ ಹೇಳಿ. ನಾನು ಕ್ಷಮೆ ಕೇಳುವುದಕ್ಕೆ ತಯಾರಿದ್ದೇನೆ. ನಾನೇನು ಮಾಡಿದೆ ಸ್ವಾಮಿ? ಒಬ್ಬ ಸಾಮಾನ್ಯ ರೈತನ ಮಗನಾಗಿ, ಈ ಕುರ್ಚಿಯಲ್ಲಿ ಕುಳಿತಾಗ, ಈ ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಹೊಸ ಗಣಿ ನೀತಿಯನ್ನು ನಾನು ಜಾರಿಗೆ ತಂದಿದ್ದೇನೆ. ಯಾರಾದರೂ ಒಬ್ಬರು ಬೆಟ್ಟು ಮಾಡಿ ತೋರಿಸಿ. ಯಡಿಯೂರಪ್ಪನವರೆ, ನೀವು ಅಧಿಕಾರಕ್ಕೆ ಬಂದ ಮೇಲೆ renew ಮಾಡಿದಿರಿ, fresh licence ಎಂದು ಒಂದು ಉದಾಹರಣೆ ಕೊಡಿ. ನನಗನಿಸುತ್ತಿರುವಂಥಾದ್ದು, ನನ್ನ ಕಾಲಾವಧಿಯಲ್ಲಿ, ಈ 8 ತಿಂಗಳಿನಲ್ಲಿ ಅನೇಕ ಒತ್ತಡಗಳ ಮಧ್ಯೆಯೂ ಸಹ ಒಬ್ಬ ವ್ಯಕ್ತಿಗೆ ಅನುಮತಿಯನ್ನು ಕೊಡಲಿಲ್ಲ, renew ಮಾಡಲಿಲ್ಲ, ಈ ದೇಶಕ್ಕೆ ಮೊದಲ ಬಾರಿಗೆ ಮಾದರಿ ಯಾಗುವ ರೀತಿಯಲ್ಲಿ ಹೊಸ ಗಣಿಗಾರಿಕೆ ನೀತಿಯನ್ನು ನಾವು ಜಾರಿಗೆ ತಂದಿದ್ದೇವೆ. ರಾಜ್ಯ ಖನಿಜ ನೀತಿಯ ಮುಖ್ಯ ಧ್ಯೇಯೋದ್ದೇಶಗಳು ಏನಿದೆ? ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ, ರಾಜ್ಯದಲ್ಲಿನ ಖನಿಜ ಸಂಪನ್ಮೂಲಗಳನ್ನು ಪರಿಶೋಧಿಸಲು ಮಹತ್ವ ನೀಡುವುದು, ಖಾಸಗಿ ಹಾಗೂ ಸಾರ್ವಜನಿಕ ಉದ್ದಿಮೆ ಕಂಪನಿಗಳ ಬೆಂಬಲದಿಂದ ಅತ್ಯಾಧುನಿಕ ತಂತ್ರಜ್ಞಾನ ಬಳಕೆಗೆ ಉತ್ತೇಜನ ನೀಡುವುದು, ರಾಜ್ಯದಲಿ ಈಗಿರುವ ಅರಣ್ಯ ಸಂಪತ್ತಿಗೆ ಮತ್ತು ಜೀವ ವೈವಿಧ್ಯತೆಗೆ ಧಕ್ಕೆಯಾಗದಂತೆ ಖನಿಜ ರಿಯಾಯಿತಿ ನೀಡುವ ನೀತಿಯನ್ನು ಅವಶ್ಯಕವಾಗಿ ಪಾಲಿಸುವುದು ಹಾಗೂ ಅತ್ಯಮೂಲ್ಯ ಅರಣ್ಯ ಸಂಪತ್ತನ್ನು ಗಣಿಗಾರಿಕೆಗೆ ಅನುಮತಿ ನೀಡುವಲ್ಲಿ ಕಾಪಾಡುವುದು, ಗಣಿಗಾರಿಕೆ ರಿಯಾಯಿತಿ ನೀಡುವಲ್ಲಿ ಪಾರದರ್ಶಕತೆಯನ್ನು ಉತ್ತೇಜಿಸುವುದು, ರಾಜ್ಯದಲ್ಲಿ ಉತ್ಪಾದಿತ ಖನಿಜಗಳಿಗೆ ಹೆಚ್ಚಿನ ಮೌಲ್ಯವರ್ಧನೆಗಾಗಿ ಕೆಳಗಿನ ಕೈಗಾರಿಕೆಗಳಿಗೆ ಗರಿಷ್ಠ ಆರ್ಥಿಕ ವಿನಿಯೋಗವಾಗುವಂತೆ ಉತ್ತೇಜನ ನೀಡುವುದು, ಖನಿಜಗಳು ಲಭ್ಯವಿರುವ ಪ್ರದೇಶಗಳ ಹತ್ತಿರ, ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ಖನಿಜ ರಿಯಾಯಿತಿಯಲ್ಲಿ ಆದ್ಯತೆ ನೀಡುವುದು.

ಖನಿಜಗಳ ಗಣಿಗಾರಿಕೆ ಮತ್ತು ಇತರೆ ಅಭಿವೃದ್ಧಿ ಕಾರ್ಯಗಳ ಬಗ್ಗೆ ಉಂಟಾಗುವ ಸಮಸ್ಯೆಗಳನ್ನು ಹೋಗಲಾಡಿಸುವ ಉದ್ದೇಶದಿಂದ ಸರ್ಕಾರ ಖನಿಜಗಳು ಲಭ್ಯತೆ ಇರುವ ಪ್ರದೇಶಗಳನ್ನು ಪ್ರಕಟಿಸುವ ಸಾಧ್ಯತೆಯನ್ನು ಪರಿಶೀಲಿಸುವುದು. ಅದಿರು ಗಣಿಗಳ ಫೈನ್ ದೇಶೀಯ ಬಳಕೆಯ ಕಡಿಮೆ ದರ್ಜೆಯ ಖನಿಜ ಸಂಪತ್ತುಗಳಿಗೆ ಉತ್ತೇಜನ ನೀಡುವುದು, ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದು. ಸ್ವಾಮಿ, ನೀವು ಮಾಡಲಿಲ್ಲ ಪರ್ಮಿಟ್ಗೆ ಲೈಸೆನ್ಸ್ ಕೊಟ್ಟುಕೊಂಡು ಬಂದಿರಿ.

ಶ್ರೀ ಟಿ.ಬಿ. ಜಯಚಂದ್ರ :- ಹಾಗೆ 6ನೇ ಪುಟದಲ್ಲಿರುವುದನ್ನು ಓದಿ.

ಡಾ॥ ಬಿ.ಎಸ್. ಯಡಿಯೂರಪ್ಪ :- ನಾನೇನು ಯಾವುದೇ ತಜ್ಞನಲ್ಲ, ನಿಮ್ಮ ಹತ್ತಿರವೆ ಇದೆ, ನಿನ್ನೆ ನೀವು ಓದಿದ್ದೀರಿ, ನಮ್ಮ ಪಾಯಿಂಟ್ ಏನೆಂದರೆ, ದಯವಿಟ್ಟು ತಮ್ಮ ಬಾಯಿಯಿಂದ, ತಾವು ನಮ್ಮ ಶಿವಮೊಗ್ಗ ಜಿಲ್ಲೆಯ ಅಳಿಯಂದಿರು, ಯಡಿಯೂರಪ್ಪನವರೆ, ನೀವು ಮುಖ್ಯಮಂತ್ರಿಗಳಾದ ಮೇಲೆ ಈ ಗಣಿಗೆ ಹೊಸ ಅನುಮತಿಯನ್ನು ಕೊಡದೆ ಹೊಸ ಖನಿಜ ನೀತಿಯನ್ನು ತಂದು,ನಮ್ಮ ಸಂಪತ್ತನ್ನು ಉಳಿಸಿ, ಮುಂದಿನ ಪೀಳಿಗೆಗೆ ಬಿಟ್ಟುಹೋಗುವಂತ ಸಾಹಸ ಮಾಡಿದ್ದೀರಿ, ನಾನು ನಿಮ್ಮ ಜೊತೆಯಲ್ಲಿರುತ್ತೇನೆಂದು ತಾವು ಒಳ್ಳೆಯ ಮಾತನ್ನು ಹೇಳುತ್ತೀರೆಂದು ನಾನು ನಿರೀಕ್ಷೆ ಮಾಡಿದ್ದೆ, ಅದನ್ನು ನಾನು ಕುಮಾರ ಸ್ವಾಮಿಯವರಿಂದ ನಿರೀಕ್ಷೆ ಮಾಡಲು ಸಾಧ್ಯವೇ? ನಾನು ನಿಮ್ಮಿಂದ ನಿರೀಕ್ಷೆ ಮಾಡಿದ್ದೆ. ನನಗೆ ಅರ್ಥವಾಗದೆ ಇರುವಂಥದ್ದು, ಅನುಮತಿ ಕೊಟ್ಟವರು ನೀವು, ಕಣ್ಣು ಮುಚ್ಚಿಕೊಂಡು ಕುಳಿತವರು ನೀವು, ಫಲಾನುಭವಿಗಳು ನಿಮ್ಮವರು, ಲಾಭ ಮಾಡಿಕೊಂಡವರು ನೀವು, ಎಲ್ಲವನ್ನೂ ನೀವೇ ಮಾಡಿ, ಇವತ್ತು ಏನೂ ಮಾಡದ ನಮ್ಮ ಮೇಲೆ ಆರೋಪ ಮಾಡುತ್ತಿರುವುದನ್ನು ಜಯಚಂದ್ರರವರೆ, ನಿಜಕ್ಕೂ ಮೆಚ್ಚಬೇಕು ಸರ್. ಹೇಗೆ ಕರಿಯನ್ನು ಬಿಳಿ, ಬಿಳಿಯನ್ನು ಕರಿ ಮಾಡಿ, ಬಹುಶಃ ಕೋರ್ಟಿನಲ್ಲಿ ನ್ಯಾಯಾಧೀಶರ ಮುಂದೆ ವಾದ ಮಾಡಿದರೆ, ಕೊಲೆಗಾರನನ್ನು ನಿರಪರಾಧಿ ಮಾಡುತ್ತೀರಿ, ನಿರಪರಾಧಿಯನ್ನು ಕೊಲೆಗಾರನೆಂದು ಪ್ರೂವ್ ಮಾಡುವ ಶಕ್ತಿ ನಿಮಗಿದೆ ನಾನು ಇಲ್ಲವೆಂದು ಹೇಳುವುದಿಲ್ಲ. ನಿಮ್ಮ ಪ್ರೌಢತೆ ಬಗ್ಗೆ, ಶಕ್ತಿಯ ಬಗ್ಗೆ ಏನು ಪ್ರಶ್ನೆ ಮಾಡುವುದಿಲ್ಲ. ಆದರೆ ನನಗೆ ಆಶ್ಚರ್ಯವೆಂದರೆ, ಸರಿ ಸರಿ, ತಪ್ಪು ತಪ್ಪು, ಎನ್ನುವ ಮಾತು ಕನ್ನಡ ನಾಡಿನ ಹಿತದೃಷ್ಟಿಯಿಂದ ನಿಮ್ಮಿಂದ ಬರಬೇಕಲ್ಲ? ನನ್ನ ಅಪರಾಧವೇನಿದೆ? 8 ತಿಂಗಳ ಅಧಿಕಾರಾವಧಿಯಲ್ಲಿ ನಾನು, ನನ್ನ ಸರ್ಕಾರ ಮಾಡಿರುವ ಅಪರಾಧವಾದರು ಏನು? ಮುಚ್ಚಿಟ್ಟವರು ನೀವು. ಬಹಿರಂಗ ಮಾಡಿದೇ ಇದ್ದವರು ನೀವು. ಇವತ್ತು ರೆಡ್ಡಿ ಸಹೋದರರು ಸಚಿವರಾಗಿ ಇಲ್ಲಿ ಕುಳಿತಿರುವುದಕ್ಕೆ ನಿಮ್ಮ ಕಣ್ಣು ಕುಕ್ಕಿತಾ? ಅವರೇನು ಮುಚ್ಚುಮರೆ ಮಾಡುತ್ತಿಲ್ಲ. ಗಣಿಗಾರಿಕೆಯನ್ನು ನಡೆಸಿದ್ದಾರೆ. ಪ್ರಾಮಾಣಿಕವಾಗಿ ದುಡಿದು ಹಣ ಮಾಡಿದ್ದೇವೆಂದು ಹೇಳಿದ್ದಾರೆ. ಅದು ಸರಿ ಇಲ್ಲವೆಂದರೆ, ಕೇಂದ್ರ ಸರ್ಕಾರ ನಿಮ್ಮದು,ರಾಜ್ಯ ಸರ್ಕಾರ ನಿಮ್ಮದು, ಇಲ್ಲಿ ಗೆರೆ ಎಳೆದುಬಿಟ್ಟು, ಇದಾಗಿದೆ ನೋಡು, ಅಲ್ಲಿ ಹೋಗು , ಇಲ್ಲಿಗೆ ಎಂಟ್ರಿ ಆಗಕೂಡದು, ಇದುವರೆವೆಗೂ ನೀನು ಮಾಡಿದ್ದೀಯಾ, ಇದು ನಿನಗೆ ದಂಡ, ಹೈಕೋರ್ಟಿದೆ, ಸುಪ್ರೀಂ ಕೋರ್ಟ್ ಇದೆ, ಕೇಂದ್ರ ಸರ್ಕಾರವಿದೆ, ಇಲ್ಲಿ ಯಾವ

ಮೊಂಡು ವಾದವನ್ನು ಮಂಡಿಸುತ್ತಿದ್ದೀರಿ? ಯಾವುದೇ ಆಧಾರ, ದಾಖಲೆಗಳಿಲ್ಲದೆ, ನೀವು ಅಪರಾಧಿ ಎಂದರೆ, ತಕ್ಷಣ ಅಪರಾಧಿ, ಇವನು ಒಳ್ಳೆಯವನು ಎಂದರೆ ಒಳ್ಳೆಯವನು. ನಾನು ಆರ್ಗ್ಯು ಮಾಡುತ್ತಿಲ್ಲ, ನಾನು ವಾಸ್ತವಿಕ ಸಂಗತಿಯನ್ನು ಪ್ರಾಮಾಣಿಕವಾಗಿ ನಿಮ್ಮ ಮುಂದೆ ಇಡುವಂಥ ಪ್ರಯತ್ನವನ್ನು ನಾನು ಮಾಡಿದ್ದೇನೆ ಅಷ್ಟೆ. ಸ್ವಾಮಿ, ನೀವು ಪ್ರಾಮಾಣಿಕರಾಗಿ ಇದ್ದಿದ್ದರೆ, ಅಕ್ರಮವಾಗಿ ಗಣಿಗಾರಿಕೆ ನಡೆಯುವುದು ನಿಲ್ಲಬೇಕೆಂದಿದ್ದರೆ ಫ್ರೆಶ್ ಲೈಸೆನ್ಸ್ ಏತಕ್ಕೆ ಕೊಟ್ಟಿರಿ? ರೆನ್ಯುವಲ್ ಏತಕ್ಕೆ ಮಾಡಿದಿರಿ? ಕೇಂದ್ರ ಸರ್ಕಾರಕ್ಕೆ, ನಮಗೆ ಏನೋ ಪುಡಿಗಾಸು ಬರುತ್ತದೆ, ಗಣಿಗಾರಿಕೆ ನಿಲ್ಲಬೇಕೆಂದು ಏತಕ್ಕೆ ಹೇಳಲಿಲ್ಲ? ಗಣಿಗಾರಿಕೆಯನ್ನು ನಿಲ್ಲಿಸುವುದಕ್ಕೆ ನಮಗೆ ಅಧಿಕಾರವಿದೆಯಾ? ನಿಯೋಗ ಹೋಗೋಣ, ಈ ದೇಶದಲ್ಲಿ ಗಣಿಗಾರಿಕೆ ಈ ದೇಶದಲ್ಲಿ ನಿಲ್ಲಬೇಕು, ಸಂಪತ್ತು ಉಳಿಯಬೇಕೆಂದು ನಿಮ್ಮ ಕೇಂದ್ರ ಸರ್ಕಾರ ಮಾಡಿಸಿ ಆ ಅಧಿಕಾರ ನನಗೆ ಇದೆಯಾ? ನಾನು ಅತ್ಯಂತ ವಿನಯದಿಂದ ಎಲ್ಲ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ, ಸಂಪತ್ತು ಉಳಿಯಬೇಕೆಂದು ಹೇಳುವಂತಹವನು. ನಮಗೆ ಅಗತ್ಯವಿರುವಷ್ಟು ಮಾತ್ರ ಖನಿಜ ಸಂಪತ್ತನ್ನು ಉಪಯೋಗಿಸಿಕೊಳ್ಳಬೇಕು. ಇಡೀ ಜಗತ್ತಿನ ಬೇರೆ ದೇಶಗಳು ತಮ್ಮ ಖನಿಜ ಸಂಪತ್ತನ್ನು ಖಾಲಿ ಮಾಡಲು ಬಿಟ್ಟಿಲ್ಲ. ಅಲ್ಲಿ ಯಾವುದೇ ಸಂಪತ್ತು ಇದ್ದರೂ ಸಹ, ಬೇರೆ ಕಡೆಯಿಂದ ತರುತ್ತಿದ್ದಾರೆಯೇ ವಿನಃ ಅದನ್ನು ಮುಂದಿನ ಪೀಳಿಗೆಗೆ ಡೆಪಾಸಿಟ್ ಮತ್ತು ಪ್ರಿಸರ್ವ್ ಮಾಡುತ್ತಿದ್ದಾರೆ. ನಾವು ಮಾಡಲಿಲ್ಲ, ಮಾಡಬೇಕಾದರೆ ಪಾರ್ಲಿಮೆಂಟಿನಲ್ಲಿ ಪಕ್ಷಭೇದ ಮರೆತು ಚರ್ಚೆ ಮಾಡೋಣ. ಗಣಿಗಾರಿಕೆ ಏತಕ್ಕೆ ಬೇಕು? ಕಬ್ಬಿಣದ, ಸ್ಟೀಲ್‌ನ ಉತ್ಪಾದನೆಗೆ ವ್ಯಾಲ್ಯು ಆಡೆಡ್‌ಗೆ ಬೇಕು, ಅದಕ್ಕೆ ಸೀಮಿತವಾಗಿ ಕೊಡೋಣ. ಎಲ್ಲಿಯವರೆಗೆಂದರೆ, ನಮ್ಮ ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ ಇದುವರೆಗೂ ಪರ್ಮಿಟ್ ಕೊಡಲಿಲ್ಲ. ಏಕೆಂದರೆ, ಅಲ್ಲಿ ಲಾಭವಿಲ್ಲ, ಇವನ್ನೆಲ್ಲಾ ಹೇಗೆ ನೀವು ಮಾಡಿದಿರಿ? ಎರಡನೆಯದಾಗಿ, ಇವತ್ತು ಕಾನೂನಿನ ಪ್ರಕಾರ ನಿಯಮ ಉಲ್ಲಂಘಿಸಿ ಕುಮಾರ ಸ್ವಾಮಿಯವರು ನವೀಕರಣವನ್ನು ಮಾಡಿಲ್ಲವೇ? ನಾನು ಅವರ ಜೊತೆಯಲ್ಲೇ ಇದ್ದೆ, ಆದರೆ ನಾನು ಅದರ ಸಚಿವನಾಗಿರಲಿಲ್ಲ. ಯಾವುದಾದರು ಒಂದು ಕಡತವನ್ನು ಯಡಿಯೂರಪ್ಪ ನೋಡಿದ್ದಾನೆ, ಯಾವುದಾದರು ಕಡತದ ಬಗ್ಗೆ ರೆಕಮೆಂಡ್ ಮಾಡಿದ್ದಾನೆಂದರೆ, ಇವತ್ತು ಹೇಳಲಿ, ಬಹಿರಂಗ ಮಾಡಲಿ. ಅವರು ಅದರ ಸಚಿವರಾಗಿದ್ದರು ಮುಖ್ಯಮಂತ್ರಿಯಾಗಿ ಅವರ ಡ್ಯೂಟಿಯನ್ನು ಮಾಡಿದ್ದಾರೆ, ನಾನು ಸಚಿವನಾಗಿ ನನ್ನ ಕರ್ತವ್ಯವನ್ನು ಮಾಡಿದ್ದೇನೆ. ನಿನ್ನೆ ಆ ಮನೆಯಲ್ಲಿ ಪ್ರಸ್ತಾಪವಾಯಿತು

ಈ ಮನೆಯಲ್ಲೂ ಬಂತು, ಯಾವುದಕ್ಕೆ ರೆಕಮಂಡೇಷನ್ ಮಾಡಿದ್ದಾರೆ, ಯವ್ಯಾವ ರಾಜಕೀಯ ಪಕ್ಷದವರು ಮಾಡಿದ್ದಾರೆ, ಯಾರ್ಯಾರು ತೆಗೆದುಕೊಂಡು ಹೋಗಿದ್ದಾರೆಂಬುದೆಲ್ಲಾ ಬಹಿರಂಗವಾಗಲಿ. ಸಭಾಧ್ಯಕ್ಷರೆ, ನೀವು ಜಂಟಿ ಸದನ ಸಮಿತಿಯನ್ನು ಮಾಡಬೇಕು, ಇದು ಯಾರದೊ ಸ್ವಂತ ಆಸ್ತಿಯಲ್ಲ, ಯಾರಿಗೆ ಪರ್ಮಿಟ್ ಕೊಟ್ಟಿದ್ದಾರೆ, ಯಾರಿಗೆ ರೆನ್ಯುವಲ್ ಮಾಡಿದ್ದಾರೆ, ಏಕೆ ರೆನ್ಯುವಲ್ ಮಾಡಿದರು? ನಿಯಮಾವಳಿ ಪ್ರಕಾರ, ಒಂದು ವರ್ಷದೊಳಗಾಗಿ well in advance ರೆನ್ಯೂವಲ್ ಮಾಡಬೇಕೆಂದು ಕೇಂದ್ರ ಸರ್ಕಾರದ ನಿಯಮವಿದೆ. ಅದನ್ನು ನಿಮಗೆ ಬೇಕಾದವರಿಗೆ 5 ವರ್ಷ, 6 ವರ್ಷ, 10 ವರ್ಷ ತಡವಾಗಿ ಅದಿರಿನ ಬೆಲೆ ನೂರುಪಟ್ಟು ಹೆಚ್ಚಾದ ಮೇಲೆ ಕಾನೂನು ಬಾಹಿರವಾಗಿ ಕುಮಾರ ಸ್ವಾಮಿಯವರು ರೆನ್ಯುವಲ್ ಮಾಡಲಿಲ್ಲವೇ? ಕೇಂದ್ರ ಸರ್ಕಾರ ಇಲ್ಲಿನ ಅಧಿಕಾರಿಗಳಿಗೆ ಮಾಡಕೂಡದೆಂದು ಅಬ್ಜೆಕ್ಟ್ ಮಾಡಲಿಲ್ಲವೇ? ಆದರೂ ಹೇಗೆ ಮಾಡಿದಿರಿ? ಯಾರಾದರು ಲಾಭವಿಲ್ಲದೆ ಮಾಡುತ್ತಾರೆಯೇ? ಕುಮಾರ ಸ್ವಾಮಿಯವರಿಗೆ ಲಾಭವೆಂದು ನಾನು ಹೇಳುತ್ತಿಲ್ಲ, ಯಡಿಯೂರಪ್ಪನ ಲಾಭದ ಪ್ರಶ್ನೆಯನ್ನು ಮಾತನಾಡುತ್ತಿಲ್ಲ, ಅದು ಯಾವ ಲಾಭ? ನಿಮಗೆ ಬೇಕಾದವರಿಗೆ ಅನುಕೂಲ ಮಾಡಿಕೊಟ್ಟರೂ ಲಾಭವೇ, ಬಂಧು ಬಳಗದವರಿಗೆ ಕೊಟ್ಟರೂ ಲಾಭವೇ. ಹಿಂದಿನ ಅಧಿಕಾರಿಗಳು ಮಾಡುವುದಿಲ್ಲವೆಂದು ಹೇಳಿರುವುದಕ್ಕೆ ರೆಕಾರ್ಡ್ ಇದೆ. ನಿಯಮವನ್ನು ಉಲ್ಲಂಘಿಸಿ ಆರ್. ಚಾರುಚಂದ್ರರವರಿಗೆ ಎರಡೂವರೆ ವರ್ಷ ವಿಳಂಬವಾದ ಮೇಲೆ ರೆನ್ಯುವಲ್ ಮಾಡಿದ್ದೀರಿ, ಕೆನರಾ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್, 16 ವರ್ಷ ವಿಳಂಬವಾದ ಮೇಲೆ ಧರ್ಮಸಿಂಗ್ ಅವರು ರೆನ್ಯುವಲ್ ಮಾಡಿದ್ದಾರೆ, ಇನ್ನೊಂದು ಕೆನರಾ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್, 15 ವರ್ಷ ವಿಳಂಬವಾದ ಮೇಲೆ ರೆನ್ಯುವಲ್ ಮಾಡಿದರು, ಕೆನರಾ ಮಿನರಲ್ಸ್ ಪ್ರೈವೇಟ್ ಲಿ. 15 ವರ್ಷಗಳ ವಿಳಂಬವಾದರು ರಿನ್ಯುವಲ್ ಮಾಡಿದರು, ಮೂಕಾಂಬಿಕಾ ಮಿನರಲ್ಸ್‌ಗೆ ಎರಡುವರೆ ವರ್ಷಗಳಾದ ಮೇಲೆ ಕುಮಾರ ಸ್ವಾಮಿಯವರು ಕೊಟ್ಟರು, ವಿ.ಎಸ್.ಸುಗುಣರಾಜ್ ಅವರಿಗೆ ಮೂರು ವರ್ಷ ವಿಳಂಬವಾದ ಮೇಲೆ ರೆನ್ಯುವಲ್ ಮಾಡಿದರು, ಕೆ.ನಿರಂಜನ್ ಇವರಿಗೆ, ಹನ್ನೊಂದುವರೆ ವರ್ಷಗಳಾದ ಮೇಲೆ ರೆನ್ಯುವಲ್ ಮಾಡಿದಿರಿ. ಇವೆಲ್ಲವನ್ನೂ ರಾಷ್ಟ್ರಪತಿಗಳ ಆಡಳಿತಾವಧಿಯಲ್ಲಿ ನವೀಕರಣವನ್ನು ರದ್ದುಪಡಿಸಲಾಗಿದೆ, ಇದರ ಅರ್ಥವೇನು? ಕಾನೂನು ಬಾಹಿರವಾಗಿ ನೀವು ಮಾಡಿದಿರಿ, ಅವಧಿ ಮುಗಿದ ಮೇಲೆ ರೆನ್ಯುವಲ್ ಮಾಡಲು ಅಧಿಕಾರವಿಲ್ಲವೆಂದು ನಿಮಗೆ ಕೇಂದ್ರ ಸರ್ಕಾರ ಪತ್ರವನ್ನು ಬರೆದಿದೆ, ಆದರೂ

ನೀವು ರಿನ್ಯುವಲ್ ಮಾಡಿದಿರಿ. ಮಾಡಿದವರು ನೀವು, ಹೇಳುವುದು ನಮ್ಮ ಮೇಲೆ, ಯಾವ ತಪ್ಪಿಗೆ ಈ ಮಾತನ್ನಾಡುತ್ತೀರಾ? ರಾಜ್ಯ ಜನತೆಯಲ್ಲಿ ಯಾರ ಮೇಲೆ ಯಾರಿಗೂ ವಿಶ್ವಾಸ ಉಳಿಯಬಾರದೆನ್ನುವ ಪ್ರಯತ್ನವೇ? ಪ್ರಜಾತಂತ್ರದ ವ್ಯವಸ್ಥೆಯ ಬಗ್ಗೆ ಚುನಾಯಿತ ಪ್ರತಿನಿಧಿಗಳ ಬಗ್ಗೆ ಜನರು ವಿಶ್ವಾಸ ಕಳೆದುಕೊಂಡಿರುವ ಈ ಸಂದರ್ಭದಲ್ಲಿ ಯಾರು ನಂಬಿಕಸ್ಥರಿರಬಾರದು, ಎಲ್ಲರ ಬಗ್ಗೆ, ಎಲ್ಲರೂ ಸಂಶಯಪಡಬೇಕು. ಇಂತಹ ವಿಚಾರಗಳನ್ನು ಚರ್ಚೆ ಮಾಡಲು ರಾತ್ರಿ ಹತ್ತು ಗಂಟೆಯಾಗಲಿ ನಾನು ಕುಳಿತುಕೊಳ್ಳುತ್ತೇನೆ. ಚರ್ಚೆ ಮಾಡೋಣ ತಪ್ಪಿದ್ದರೆ ನಾನು ತಿದ್ದುಕೊಳ್ಳುತ್ತೇನೆ. ನಾನು ಹೇಳುವುದು ನಮ್ಮ ಯುವಕ ಶಾಸಕರು ಏನೆಲ್ಲಾ ಮಾಡಿದ್ದಾರೆ, ಏನೆಲ್ಲಾ ನಡೆಯಬಾರದು, ಈ ಬಗ್ಗೆ ಚರ್ಚೆ ಮಾಡುವಂಥ ಕಾಲ. ಕೇವಲ ಗಣಿಗಾರಿಕೆಯೆಂದಲ್ಲಾ, ಅನೇಕ ವಿಷಯಗಳಿವೆ ಚರ್ಚೆ ಮಾಡೋಣ. ಅಭಿವೃದ್ಧಿಯ ಬಗ್ಗೆಯೂ ಚರ್ಚೆ ಮಾಡೋಣ, ಯಾರ್‍ಯಾರು ಕೈಜೋಡಿಸಿಕೊಂಡು ಲೂಟಿ ಮಾಡಿದರು ಎನ್ನುವುದನ್ನು ಚರ್ಚೆ ಮಾಡೋಣ. ಕಾಂಟ್ರ್ಯಾಕ್ಟ್ ನೂರು ಕೋಟಿ ರೂಪಾಯಿಗಳ ಎಸ್ಟಿಮೇಟ್, 150 ಕೋಟಿ ಬಿಲ್ ಮಾಡುವುದು, ನಿನಗಷ್ಟು,ನನಗಷ್ಟು ಕ್ವಾಲಿಟಿ ವರ್ಕ್ ಆಗುವುದಿಲ್ಲ. ಅಂತಹ ನೂರು ಉದಾಹರಣೆಗಳಿವೆ ಇಲ್ಲಿ ಚರ್ಚೆಯಾಗ ಬೇಕಾಗಿದೆ, ನನ್ನ ಹತ್ತಿರ ದಾಖಲೆಗಳಿದ್ದಾವೆ. ನಮ್ಮ ಅಧಿಕಾರಿಗಳಿಗೆ ವಿನಂತಿ ಮಾಡುತ್ತೇನೆ, ಯಾರ ಕಾಲದಲ್ಲಿ ಯಾವನೇ ಅಧಿಕಾರಿ ಇದ್ದರು ಸಹ ನೀವು ಕಾಯಂ ಆಗಿ ಇರುತ್ತೀರಾ, ಬಲಿಬಶು ಆಗುವವರು ನೀವು, ಬಹಳ ಎಚ್ಚರಿಕೆಯಿಂದ ಯೋಚನೆ ಮಾಡಬೇಕಾಗಿದೆ ಶಾಸಕರಾದರೂ ಮಂತ್ರಿಗಳಾದರೂ ಇದಾಗಲೇ ಬೇಕೆಂದು ಮೇಲೆ ಬೀಳುತ್ತೇವೆ. ಕಾನೂನು ಬಾಹಿರವಾಗಿ ಮಾಡಿದರೆ ಅವನ ಹೆಂಡತಿ ಮಕ್ಕಳು ಬೀದಿ ಪಾಲಾಗುತ್ತಾರೆ, ಕೋರ್ಟಿನಲ್ಲಿ ಕೈಕಟ್ಟಿಕೊಂಡು ಕುಳಿತುಕೊಳ್ಳುವವರು ಅವರು ನಾವಲ್ಲ. ಅಂಥವರು ನಿಮ್ಮಲ್ಲೂ ಇದ್ದಾರೆ ನಮ್ಮಲ್ಲೂ ಇದ್ದಾರೆ, ಅದು ಬೇರೆ ವಿಷಯ. ಪ್ರಶ್ನೆ ಏನೆಂದರೆ, ಈ ಗಣಿಗಾರಿಕೆಯ ವಿಷಯದಲ್ಲಿ ನಾನು ವಿವರಕ್ಕೆ ಹೋಗುವುದಿಲ್ಲ, ಕುಮಾರಸ್ವಾಮಿಯವರಿಗೆ ಬೇಸರವಾಗಬಹುದು. ಯಾವ ಅಧಿಕಾರಿ ಇದು ಸಾಧ್ಯವೇ ಇಲ್ಲವೆಂದು ಹೇಳಿದರು, ಕಡತದಲ್ಲಿ ಮಾಡಿ ಎಂದು ಬರೆದರು, ಅದು ಧರ್ಮಸಿಂಗ್ ಕಾಲವಾಗಿರಬಹುದು, ಕುಮಾರಸ್ವಾಮಿ ಕಾಲವಾಗಿರಬಹುದು, ಯಡಿಯೂರಪ್ಪನವರ ಕಾಲವಾಗಿರಬಹುದು, ಇದು ನಡೆದುಕೊಂಡು ಬಂತು.

ಯಾರಿಗೆ ಈ ರೆನ್ಯುವಲ್ ಆಗಿದೆ? ಗಣಿಗಾರಿಕೆ ಬಗ್ಗೆ ಗೊತ್ತಿರುವಂಥವರಾ? ಅವರು ಪ್ರಭಾವಿ ವ್ಯಕ್ತಿಗಳು, ರಾಜಕಾರಣದಲ್ಲಿ ಇದ್ದವರು, MLA ಆದವರು, MP

ಆದವರು ಬಂಧು ಬಳಗದವರು. ಅದೇ ವೃತ್ತಿಯಲ್ಲಿ ತರಬೇತಿ ಹೊಂದಿ ಅನುಕೂಲ ಆದಂತಹವರು ಆ ಲಾಭ ಮಾಡಿಕೊಳ್ಳಲಿಲ್ಲ. ಆದ್ದರಿಂದ ನಾನು ಅತ್ಯಂತ ವಿನಯದಿಂದ ಈ ಮನೆಯ ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡುವುದು, ತಾವು BJP ಬೆಳೆಯುತ್ತಿದೆ, 110 ಗೆದ್ದಿದ್ದರು, ಮತ್ತೆ ಐದು ಸೀಟುಗಳನ್ನು ಗೆದ್ದರು, ಲೋಕಸಭೆ ಚುನಾವಣೆ ಹತ್ತಿರ ಬರುತ್ತಿದೆ ಎಂದು ಹೇಳಿ ನಮ್ಮನ್ನು ಏನೋ ಮಾಡುವುದಕ್ಕೆ ಹೋಗಿ ನೀವೇ ಸಿಕ್ಕಿ ಬಿದ್ದಿರಿ. ನೀವು ಹೇಳುವುದಕ್ಕೆ ನಮ್ಮದು ಏನೂ ಉಳಿದಿಲ್ಲ. ಹೇಳುವುದು ಎಲ್ಲಾ ಹೇಳಿದ್ದೀರಿ. ಹೇಳುವುದಕ್ಕೆ ಇನ್ನು ಮೂರು ದಿನ ಸಮಯ ಇದೆ. ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿ ಬಗ್ಗೆ, ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ ಬಗ್ಗೆ ವಿಶೇಷವಾದ ಚರ್ಚೆ ಆಗಬೇಕೆಂದು ನಾನು ಅಂದುಕೊಂಡಿದ್ದೆ. ನಿಯಮ ಬಾಹಿರವಾದ ರೀತಿಯಲ್ಲಿ ರೆನ್ಯುವಲ್ ಮಾಡಿದಿರಿ, ಫ್ರೆಶ್ ಲೈಸನ್ಸ್ ಕೊಟ್ಟಿರಿ, ದೇವರು ಮೆಚ್ಚುತ್ತಾನಾ? ಇದರ ಬಗ್ಗೆ ನಿಮ್ಮ ಆತ್ಮ ಸಾಕ್ಷಿ ಒಪ್ಪುತ್ತದೆಯಾ? ಬಳ್ಳಾರಿ ಒಂದು ತೋರಿಸಿಕೊಂಡು ಎದೆ ತಟ್ಟಿ ಮಾತನಾಡುತ್ತೀರಿ. ನಾವು ಮಾಡಿದ್ದೇನು? ನೀವು ಮಾಡಿದ್ದೇನು? ಈ ಎಲ್ಲ ಪ್ರಶ್ನೆಗಳಿಗೆ ನಮಗೆ ನಾವು ಪ್ರಶ್ನೆಯನ್ನು ಹಾಕಿಕೊಂಡು ಉತ್ತರವನ್ನು ಪಡೆಯಬೇಕು. ಹಾಸನ ರಿಂಗ್ ರೋಡ್ ಭೂಸ್ವಾಧೀನ ಆಗದೆ contract ಕೊಟ್ಟರು. ಲೋಕಾಯುಕ್ತರಿಗೆ ವಹಿಸಿದ್ದೇನೆ. ವರದಿ ಬರಲಿ. KPTCL ನ 5000 ನೇಮಕಾತಿಗಳ ಬಗ್ಗೆ ನಡೆದ ಅಕ್ರಮ ಎಂದು ನಾವು ಅಂದುಕೊಂಡಿದ್ದೇವೆ. ಲೋಕಾಯುಕ್ತಕ್ಕೆ ರೆಫರ್ ಮಾಡಿದ್ದೇವೆ. ಮೇವರಿಕ್ ಹಗರಣ ಆಪಾದನೆ ಮಾಡಿದಿರಿ, ನಾನು ಲೋಕಾಯುಕ್ತಕ್ಕೆ ಕೊಟ್ಟಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ :- ಗಣಿಗಾರಿಕೆ ಬಗ್ಗೆ ಮಾತನಾಡಿ. ನಾನು ಲೋಕೋಪಯೋಗಿ ಮಂತ್ರಿ ಆಗಿದ್ದೆ, ಇಂಧನ ಇಲಾಖೆಯ ಮಂತ್ರಿ ಆಗಿದ್ದೆ. ಅಧ್ಯಕ್ಷರೆ, ಚರ್ಚೆ ಆಗುತ್ತಿರುವುದು ಗಣಿಗಾರಿಕೆ ಬಗ್ಗೆ. ಹಾಸನ ರಿಂಗ್ ರೋಡ್ ಇವೆರಡೂ ಸೇರಿಸಿ CBI refer ಮಾಡಿ. ನಾನು ಐದು ನಿಮಿಷ ರಾಜಕೀಯದಲ್ಲಿ ಇರುವುದಿಲ್ಲ. ನೀವು 20 ತಿಂಗಳು ಹಣಕಾಸು ಮಂತ್ರಿ ಆಗಿ ಏನು ಮಾಡಿದ್ದೀರಿ ಎಂದು ಅದನ್ನೂ ಬಹಿರಂಗಪಡಿಸುವುದಕ್ಕೆ ನಾನು ತಯಾರಾಗಿದ್ದೇನೆ.

ಡಾ|| ಬಿ.ಎಸ್. ಯಡಿಯೂರಪ್ಪ :- ನಾನು ಏನು ಹೇಳುತ್ತಿದ್ದೇನೆಂದು ನೀವು ಅರ್ಥ ಮಾಡಿಕೊಳ್ಳುತ್ತಿಲ್ಲ. ನಂಜನಗೂಡಿನ SEZನಲ್ಲಿ ಏನು ನಡೆಯಿತು?ಲೋಕಾಯುಕ್ತರ ಬಗ್ಗೆ ವಿಶ್ವಾಸ ಇದೆ ಎನ್ನುವುದಕ್ಕೆ ನಾನು ಹೇಳುತ್ತಿದ್ದೇನೆ. ಇವೆಲ್ಲವನ್ನು ತನಿಖೆಗೆ ಆದೇಶ ಮಾಡಿರುವುದು ಲೋಕಾಯುಕ್ತರಿಗೆ.

ಶ್ರೀ ಹೆಚ್.ಡಿ. ರೇವಣ್ಣ :- ನಿಮಗೆ ವಿಶ್ವಾಸ ಇದ್ದರೆ ಮಂತ್ರಿಗಳ ಮೇಲೆ ಮತ್ತು ಮುಖ್ಯ ಮಂತ್ರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕೊಡಿ. ಅಂತಹ ವಿಶ್ವಾಸ ಇಲ್ಲದಿದ್ದರೆ ಸುಮ್ಮನೆ ಏಕೆ ಲೋಕಾಯುಕ್ತರ ಮೇಲೆ ಬ್ಲೇಮ್ ಮಾಡುತ್ತೀರಿ?

ಡಾ॥ ಬಿ.ಎಸ್. ಯಡಿಯೂರಪ್ಪ :- ನಿನ್ನೆ ಮಾನ್ಯ H.D. ಕುಮಾರಸ್ವಾಮಿಯವರು ಮಾತನಾಡಬೇಕಾದರೆ ಮಾನ್ಯ ಯಡಿಯೂರಪ್ಪನವರೇ ತಮ್ಮ ಪಕ್ಷದ ಶಾಸಕರು ಅಥವಾ ಅವರ ಸಂಬಂಧಿಕರಿಗೆ ಶಿಫಾರಸ್ಸು ಮಾಡಿದ್ದು ಮಾತ್ರವಲ್ಲದೆ, BJP ಮತ್ತು ಕಾಂಗ್ರೆಸ್ ಶಾಸಕರು ಶಿಫಾರಸ್ಸೂ ಮಾಡಿದವರಿಗೂ, ಗಣಿ ವಿಷಯದಲ್ಲಿ ಸಹಾಯ ಮಾಡಿದವರಿಗೂ ಹೇಳಿದಿರಿ. ಯಾರೇ ಇರಬಹುದು ಕುಮಾರಸ್ವಾಮಿಯವರೇ, ನಾವೂ ಈಗ ಸರ್ಕಾರ ನಡೆಸುತ್ತಿದ್ದೇವೆ. ಸಮ್ಮಿಶ್ರ ಸರ್ಕಾರದಲ್ಲಿ ನಾವು ಇದ್ದೆವು. ಒಂದು ದಿನ ನಿಮ್ಮ ಹತ್ತಿರ ಬಂದು ಕಾನೂನು ಬಾಹಿರವಾಗಿ ನಿಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸುವಂತಹ ಕೆಲಸ ಮಾಡಿದ್ದೇನೆಂದು ಒಂದು ಉದಾಹರಣೆ ಕೊಟ್ಟು ಬಿಡಿ. ಬಹಳ ಚೆನ್ನಾಗಿದ್ದೆವು, ಒಟ್ಟಾಗಿದ್ದೆವು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಕಾಕಂಬಿ ವಿಷಯದಲ್ಲಿ ತಾವು ಯಾವ ತರಹ ನಡೆದುಕೊಂಡಿರಿ? ಕಬ್ಬು ಮಾರುವುದಕ್ಕೆ ರೈತರು ಸಾಯುತ್ತಿದ್ದರು. ಈ ತರಹ ಚರ್ಚೆ ಮಾಡಿದರೆ ಏನು? ಉಪಾಧ್ಯಕ್ಷರೆ, ನನ್ನ ಹೆಸರು ಎತ್ತಿದ್ದಾರೆ ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ಯಾವ ಯಾವ ವಿಷಯಗಳನ್ನು ನನ್ನ ಹತ್ತಿರ ಸಹಿ ಹಾಕಿಸಿಕೊಂಡು ಹೋಗಿದ್ದಾರೆ, ಅದರ ಬಗ್ಗೆ ನಾನು ಹೇಳಬೇಕಲ್ಲ? ಕಾಕಂಬಿ ವಿಷಯದಲ್ಲಿ ಕಬ್ಬು ಕಡಿದ ರೈತರು ಸಾಯುತ್ತಿದ್ದರು. ಕಾಕಂಬಿ ಮಾರಲಿಕ್ಕೆ ಪರ್ಮಿಟ್ ಇಶ್ಯೂ ಮಾಡಲಿಕ್ಕೆ ಏನೇನು ನಡೆಸಿದವರು ಇವರು? ಇವರು ಸತ್ಯ ಹರಿಶ್ಚಂದ್ರರು. ಗಣಿ ಬಗ್ಗೆ ಚರ್ಚೆ ಮಾಡಿ ನೀವು. . .

ಡಾ॥ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಕುಮಾರಸ್ವಾಮಿಯವರೇ, ನಾನು ಏನು ಹೇಳುತ್ತಿದ್ದೇನೆಂದರೆ, ನೀವು ಅರ್ಥ ಮಾಡಿಕೊಳ್ಳಿ. ನಾವು ನೀವು ಒಟ್ಟಿಗೆ ಇದ್ದವರು. ಆ ಸಂದರ್ಭದಲ್ಲಿ ನನ್ನಿಂದ ನೀವು ಏನೂ ಮಾಡಿ ಎಂದು ಹೇಳಲಿಲ್ಲ. ನಾನು ನಿಮಗೆ ಏನೂ ಒತ್ತಾಯ ಮಾಡಿ ಏನೂ ಮಾಡಿಸಲಿಲ್ಲ. ಈ ಗಣಿಗಾರಿಕೆ ವಿಷಯದಲ್ಲಿ ನನಗೆ ಏನೂ ಗೊತ್ತಿಲ್ಲ ಅಕಸ್ಮಾತ್ ನಮ್ಮವರು ಏನಾದರೂ ಬಂದಿದ್ದರೆ ಲೋಕಸಭಾ ಸದಸ್ಯರು ಬರೆದು ಕೊಟ್ಟಿದ್ದು ನಾನೇ ಹೆಸರನ್ನು ಓದಿದೆ. ಆದ್ದರಿಂದ ನಾನು ನಿಮಗೆ ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ಅಕಸ್ಮಾತ್

ನೀವು ಸರ್ಕಾರ ಉಳಿಸಿಕೊಳ್ಳಬೇಕು, ಸಮ್ಮಿಶ್ರ ಸರ್ಕಾರದಲ್ಲಿ B.JP ಯವರನ್ನು ಚೆನ್ನಾಗಿ ಇಟ್ಟುಕೊಳ್ಳಬೇಕೆಂದು ಕೊಟ್ಟಿದ್ದರೂ ಸಹ ಅದು ಅಕ್ಷಮ್ಯ ಅಪರಾಧ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮನ್ಯ ಉಪಾಧ್ಯಕ್ಷರೆ, ನಾನು ಹೇಳಿದ್ದು ನನ್ನ ಕಾಲದಲ್ಲಿ ಕೊಟ್ಟಿರತಕ್ಕಂತಹ ಗಣಿಗಾರಿಕೆ ಲೈಸನ್ಸ್ ಈಗಾಗಲೇ ನೀವು 2008 ಸೆಪ್ಟಂಬರ್‌ವರೆಗೆ ಲೋಕಾಯುಕ್ತರಿಗೆ ನೀವೇ ರೆಫರ್ ಮಾಡಿಕೊಂಡಿದ್ದೀರಿ. ನಮ್ಮ ಕಾಲದ್ದು ಸೇರಿಕೊಂಡು ಆಗಿದೆ ಲೋಕಾಯುಕ್ತ ವರದಿ ಬರುವವರೆಗೆ ನಾವೂ ನೀವೂ ಕಾಯೋಣ. ನಾನು ತಪ್ಪಿತಸ್ಥ ಇದ್ದರೆ ಶಿಕ್ಷೆ ಅನುಭವಿಸಲಿಕ್ಕೆ ಸಿದ್ಧನಾಗಿದ್ದೇನೆ. ಕಾನೂನು ಬಾಹಿರವಾಗಿ ನಾನು ಏನಾದರೂ ಕೊಟ್ಟಿದ್ದರೆ, ಇವತ್ತು ನಾನು ಅಂತಹ ತಪ್ಪುಗಳೇನಾದರೂ ಮಾಡಿದ್ದರೆ,ಲೋಕಾಯುಕ್ತರು ಏನು ವರದಿ ಕೊಡುತ್ತಾರೆ ಅದನ್ನು ತಲೆ ಬಾಗಿ ಸ್ವೀಕಾರ ಮಾಡುತ್ತೇನೆ. ಇವತ್ತು ಇಲ್ಲಿ ಇಗತಕ್ಕಂತಹ ಪ್ರಶ್ನೆ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಮಾಡುವುದು ವಿರೋಧ ಪಕ್ಷದ ನಾಯಕರು ಹಲವಾರು ವಿಷಯಗಳನ್ನು ಇಲ್ಲಿ ಏನು ಚರ್ಚೆ ಮಾಡಿದ್ದಾರೆ ಅವರು ಕೊಟ್ಟಿರತಕ್ಕಂತಹ ವರದಿ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಹೇಳಿ. ನಮ್ಮ ಮೇಲೆ ಈಗಾಗಲೆ ಎಲ್ಲಾ ಮಾಹಿತಿ ಕಳುಹಿಸಿದ್ದೀರಿ. ನಾವು ಮಾಡಿರತಕ್ಕಂತಹ ವಿಚಾರಗಳನ್ನು ಲೋಕಾಯುಕ್ಕತರಿಗೆ ರೆಫರ್ ಮಾಡಿದ್ದೀರಿ. . ಉತ್ತರ ಬರುವವರೆಗೆ ಕಾಯೋಣ.

ಡಾ॥ ಬಿ.ಎಸ್. ಯಡಿಯೂರಪ್ಪ :- ಕುಮಾರಸ್ವಾಮಿಯವರೇ ನಾನು ಏನು ಹೇಳಿದೆ ಎಂದರೆ, ಇವತ್ತು ಆದರೂ ಈ ನಿಮಿಷದಿಂದ ಇದಕ್ಕೆ ಮಂಗಳ ಹಾಡಿ. ವಿರೋಧ ಪಕ್ಷದ ಸದಸ್ಯರಿಗೆ ಎಷ್ಟು ಹೊಟ್ಟೆ ನೋವು ಬರುತ್ತಿದೆ ಎಂದು ನಿಮಗೆ ಏನು ಗೊತ್ತು? ಅವರು ಎದ್ದು ನಿಂತುಕೊಳ್ಳದೆ ಏನು ಮಾಡುತ್ತಾರೆ? ನಿಮಗೇನು ಸಂಕಟ? ನೀವು ಏಕೆ ಎದ್ದು ನಿಂತುಕೊಳ್ಳುತ್ತೀರಿ? ಬಹಳಷ್ಟು ವಿಷಯಗಳು ಇವೆ. ಒಂದೊಂದು ಅಧಿವೇಶನದಲ್ಲಿ ಒಂದೊಂದು ಪ್ರಮುಖವಾದ ವಿಷಯದ ಬಗ್ಗೆ ಚರ್ಚೆ ಮಾಡಿ ಇನ್ನು ಮುಂದೆ ಹಾಗೆ ಮಾಡುವುದಿಲ್ಲವೆಂದು ನಾವು ನೀವೂ ಹೇಳೋಣ. ಒಟ್ಟಾಗಿ ನಾಡಿನ ಜನರ ಸೇವೆ ಮಾಡುವ ಸೇವಕರು ನಾವು. ನಾವು ಕಸ್ಟೋಡಿಯನ್ಸ್ ಇದ್ದೇವೆ, ಲೂಟಿ ಮಾಡುವುದಕ್ಕೆ ಬಂದವರು ಅಲ್ಲ ಎನ್ನುವುದನ್ನು ನಮಗೆ ನಾವು ಮನವರಿಕೆ ಮಾಡಿಕೊಂಡು ಹೆಜ್ಜೆ ಇಡುವಂತಹ ಪ್ರಾಮಾಣಿಕ ಪ್ರಯತ್ನ ಮಾಡೋಣ. ಒಂದು ಬದಲಾವಣೆ ತರೋಣ. ಈಗಲಾದರೂ ಹೇಳಿ. ಮಾನ್ಯ ಯಡಿಯೂರಪ್ಪನವರೇ ನಾವು ನಿಮ್ಮ ಜೊತೆಗಿದ್ದೇವೆ. ಹೊರ ದೇಶಕ್ಕೆ ಸಾಗಾಣಿಕೆ ಮಾಡುವುದಕ್ಕೆ ಬಿಡುವುದಿಲ್ಲ.

Export ಗೆ ಅನುಮತಿ ಕೊಡಬೇಡಿ, ಕೇಂದ್ರ ಸರ್ಕಾರ ಒತ್ತಾಯ ಮಾಡಬಹುದು. ಇವತ್ತು ಕೇಂದ್ರ ಸರ್ಕಾರ ಈ ವಿಷಯದಲ್ಲಿ ಬಿಗಿ ನಿಲುವನ್ನು ತೆಗೆದುಕೊಂಡಿದ್ದರೆ ಇದೆಲ್ಲಾ ನಡೆಯುತ್ತಿರಲಿಲ್ಲ. ರಾಯಲ್ಟಿ ಬಗ್ಗೆ ನಾನು ಉದಾಹರಣೆ ಕೊಟ್ಟೆ. ಒಂದು ಸಾವಿರ ಕೋಟಿ ಬರುವುದರಲ್ಲಿ 800 ಕೋಟಿ ರೂಪಾಯಿ ಬರಲಿಲ್ಲ. ಈಗಲಾದರೂ ನಿಶ್ಚಯ ಮಾಡಿ ಯಡಿಯೂರಪ್ಪನವರೇ ಹೊಸ ಗಣಿಗಾರಿಕೆ ನೀತಿ ತಂದಿರುವುದು ಸರಿ ಇದೆ. ಮಾನ್ಯ ಜಯಚಂದ್ರರವರೇ ಲೋಪದೋಷಗಳಿದ್ದರೆ ಹೇಳಿ ಸರಿಪಡಿಸೋಣ. ನಾನು ಮಾಡಿರುವುದರಲ್ಲಿ ನಿಮಗೆ ಇನ್ನು ಏನಾದರೂ ಪರಿವರ್ತನೆ ಮಾಡಬೇಕು, ಸುಧಾರಣೆ ಮಾಡಬೇಕು, ಬಿಗಿ ಮಾಡಬೇಕು, ಈ ದಂಧೆಯನ್ನು ನಿಲ್ಲಿಸಬೇಕೆಂದರೆ ಸಲಹೆ ಕೊಡಿ. ನಾನೇನೂ ಬೃಹಸ್ಪತಿ ಅಲ್ಲ, ನಿಮ್ಮಂತಹ 10 ಜನರಿಗೆ ಕೇಳಿ ಬರೆದಿದ್ದೇನೆ. ನಾನೇನು ಕಾನೂನು ಓದಿಲ್ಲ. ಮಾರ್ಪಾಡು ಆಗಬೇಕೆಂದರೆ ಮತ್ತೆ ಮಾಡೋಣ. ನಾನು ಬಿಚ್ಚು ಮನಸ್ಸಿನಿಂದ ಇದ್ದೇನೆ. ನಾನು ನಿಮ್ಮಲ್ಲಿ ಒಂದೆ ವಿನಂತಿ ಮಾಡುವುದೇನೆಂದರೆ, ನಾವು ಈಗ ಏನು ಮಾಡುತ್ತಿದ್ದೇವೆ ಗೊತ್ತಾ? ಗಾಜಿನ ಮನೆಯಲ್ಲಿ ಕುಳಿತು ಕಲ್ಲು ಹೊಡೆಯುತ್ತಿದ್ದೇವೆ. ನಮ್ಮ ಮೇಲೆಯೇ ಬೀಳುತ್ತದೆ. ನಮಗೆ ಕಲ್ಪನೆ ಇಲ್ಲ. ನಮ್ಮ ಈ ಮನೆ ಈ ಸದನ ಈ ನಾಡಿನ ಐದೂವರೆ ಆರು ಕೋಟಿ ಜನರ ಕಲ್ಯಾಣದ ಬಗ್ಗೆ, ನೀರಾವರಿ ಬಗ್ಗೆ, ಗ್ರಾಮೀಣಾಭಿವೃದ್ಧಿ ಬಗ್ಗೆ ಶ್ರೀ ಸಾಮಾನ್ಯನ ಬಗ್ಗೆ ಕಳೆದ ಮೂರು ದಿವಸಗಳಿಂದ ಒಂದು ಚರ್ಚೆ ಆಯಿತಾ? ನಿಮ್ಮ ಉದ್ದೇಶ ಏನಿರಬಹುದು? ನನಗೆ ಅನುಮಾನ. ಜನ ಮಾತನಾಡುತ್ತಿದ್ದಾರೆ. ನಿನ್ನೆ ಪತ್ರಿಕೋದ್ಯಮದವರು ಕೆಲವರು ಸಿಕ್ಕಿದ್ದರು ಮಾನ್ಯ ಯಡಿಯೂರಪ್ಪನವರೇ ಸ್ಟ್ರಾಟಜಿ ನಿಮಗೆ ಗೊತ್ತಾ? ನೋಡಿ ಅಲ್ಲಿ ಧರಣಿ ಮಾಡುತ್ತಿದ್ದಾರೆ. ಅದು ಅವರಿಗೆ ಸ್ವಾತಂತ್ರ್ಯ ಇದೆ. ಇಲ್ಲಿ ದಿನೇ ದಿನೇ ವೆಲ್ ಗೆ ಬರುತ್ತಿದ್ದಾರೆ. ಏಕೆಂದರೆ ಪ್ರಮುಖವಾದ ವಿಷಯ ಗಳು ಚರ್ಚೆಯಾಗಬಾರದು. ಉತ್ತರ ಕರ್ನಾಟಕ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬಗ್ಗೆ ಚರ್ಚೆ ಆಗಬಾರದು. ಲೋಕಸಭಾ ಚುನಾವಣೆ ಬರುತ್ತಿದೆ. ನೀವು ಎದ್ದು ಏನಾದರೂ ಉತ್ತರ ಕೊಡುತ್ತೀರಾ, ಆ ಕಡೆ ಗಮನ ಕೊಟ್ಟು ಬಿಡುತ್ತೀರಾ, ಅದಕ್ಕೆ ಏನೂ ಚರ್ಚೆ ಆಗದೆ ಅಧಿವೇಶನ ಮಾಡಿ ಮುಗಿಸಬೇಕೆಂಬ ತಂತ್ರಗಾರಿಕೆ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ನಾನು ಒಪ್ಪಲಿಲ್ಲ ನಿಮ್ಮ ಬಗ್ಗೆ ನನಗೆ ವಿಶ್ವಾಸ ಇದೆ. ಆದರೆ ಈ ಪರಿಸ್ಥಿತಿಗಳನ್ನು ನೋಡಿದಾಗ ಆ ರೀತಿ ಅನುಮಾನ ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ಆರು ಬಿಲ್ ಪಾಸ್ ಮಾಡಿ ಕೊಟ್ಟಿದ್ದೇವೆ. ಏನು ಆಟ ಆಡುತ್ತಿದ್ದೇವಾ ಇಲ್ಲಿ? ಆರು ಗಂಟೆಗೆ

ಪ್ರಾರಂಭವಾಗಿದ್ದು, ಇದುವರೆಗೆ 6 ಬಿಲ್ಲುಗಳನ್ನು ಪಾಸ್ ಮಾಡಿ ಕೊಟ್ಟಿದ್ದೇವೆ. ನೀವು ಇಲ್ಲಿ ಇರಲಿಲ್ಲ. ಇಲ್ಲಿ ಚರ್ಚೆ ಮಾಡುವುದಕ್ಕೆ ನೀವೊಬ್ಬರೇ ಚಾಂಪಿಯನ್ ಈ ಕಡೆ ಯಾರೂ ಚರ್ಚೆ ಮಾಡುವುದಿಲ್ಲ ಎಂದರೆ, ನಾವೆಲ್ಲಾ ಹರಟೆ ಹೊಡೆಯುವುದಕ್ಕೆ ಬಂದಿದ್ದೇವಾ? ಸ್ವಲ್ಪ responsibility ಇಟ್ಟು ಮಾತನಾಡಬೇಕು. ಅದು ಬಿಟ್ಟು ನೀವು ಬರಲಿಲ್ಲ, ಇವರಿಗೆ ಇಂಟರೆಸ್ಟ್ ಇಲ್ಲ ಎಂದರೆ ಏನು ಅರ್ಥವಾಗುತ್ತದೆ? ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಎಲ್ಲಾ ಬಿಲ್ ಪಾಸ್ ಮಾಡಿ ಕೊಟ್ಟು participate ಮಾಡಿದ್ದೇವೆ. ಅದನ್ನು ಬಿಟ್ಟು ಏನೂ ಆಗಲಿಲ್ಲವೆಂದರೆ ಹೇಗೆ?

ಡಾ॥ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಲೋಕಾಯುಕ್ತರ ತನಿಖೆ ಬಗ್ಗೆ ಬರೋಣ. ಲೋಕಾಯುಕ್ತ ತನಿಖೆಗೆ ಮೊದಲು ಆದೇಶ ಮಾಡಿದ್ದು ಮಾನ್ಯ ಕುಮಾರಸ್ವಾಮಿಯವರು. ನಾನು ಅಭಿನಂದನೆ ಸಲ್ಲಿಸುತ್ತೇನೆ.

ಅವರ ತನಿಖೆಯ ಆದೇಶದ ಅವಧಿ ಜನವರಿ 2000 ದಿಂದ ಜುಲೈ 2000 ದವರೆಗೆ. ನಾನೇನು ಮಾಡಿದೆ ಸ್ವಾಮಿ? ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತೇನೆ. ನಾನು ಸತ್ಯ ಹರಿಶ್ಚಂದ್ರ ಎಂದು ಹೇಳಿಕೊಳ್ಳಬಹುದು, ಆದರೆ ಜಗತ್ತಿಗೆ ಅದು ಗೊತ್ತಾಗಬೇಕಲ್ಲ.? ಸತ್ಯಾಸತ್ಯ ಹೊರಗೆ ಬರಬೇಕಲ್ಲ? ನೀವ್ಯಾರೂ ಡಿಮ್ಯಾಂಡ್ ಮಾಡದೇ ಇದ್ದರೂ ಕೂಡ ನಾವು ಡಿಸೆಂಬರ್ ಕೊನೆಯವರೆಗೆ ಲೋಕಾಯುಕ್ತರಿಗೆ ನೀವು ವರದಿಯನ್ನು ಕೊಡಿ ಎಂದು ಹೇಳಿದ್ದೇವೆ. ಲೋಕಾಯುಕ್ತರಿಗೆ ಈಗೇನಾಯಿತು ಹೇಳಿ. ನಾನು ಪ್ರಾಮಾಣಿಕವಾದ ವರದಿಯನ್ನು ಕೊಟ್ಟರೂ ನನ್ನ ಮೇಲೆ ಅನುಮಾನ ಪಡುವುದಾದರೆ ಯಾರಿಗೆ ಬೇಕಾಗಿದೆ ಎಂದು ಹೇಳಿ ಅವರು ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ. ನಾನು ಲೋಕಾಯುಕ್ತರವರಿಗೆ ಈ ಮನೆಯ ಮೂಲಕ ವಿನಂತಿಯನ್ನು ಮಾಡುತ್ತೇನೆ, ನಿಮ್ಮ ಬಗ್ಗೆ ಶ್ರದ್ಧೆ ಇದೆ, ಗೌರವವಿದೆ. ಆ ಶ್ರದ್ಧಾ ಕೇಂದ್ರಕ್ಕೆ ಭಂಗ ತರುವಂಥ ಕೆಲಸವನ್ನು ಮಾಡುವಂಥ ಜನ ಇಲ್ಲಿ ಯಾರೂ ಇಲ್ಲ. ಪೂರ್ಣವಾಗಿ ನಾವು ಸಹಕಾರವನ್ನು ನಿಮಗೆ ಕೊಡುತ್ತೇವೆ, ಇಂಪ್ಲಿಮೆಂಟ್ ಮಾಡುತ್ತೇವೆ. ಆದುದರಿಂದ ಲೋಕಾಯುಕ್ತರವರು ಸಲ್ಲಿಸಿರುವಂಥ ಮೊದಲನೆಯ ಹಂತದ ವರದಿ ಸುಮಾರು 1540 ಪುಟಗಳಿವೆ. ಇದನ್ನು ಅಧ್ಯಯನ ಮಾಡಿ ಅವರ ಶಿಫಾರಸ್ಸಿನ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರ ಸಂಕ್ಷಿಪ್ತ ವರದಿ ಮತ್ತು ಸಲಹೆ ನೀಡುವುದಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳವರ ನೇತೃತ್ವದಲ್ಲಿ ಸಮಿತಿ ರಚಿಸಿದೆ.

ಆ ಸಮಿತಿ ಈಗಾಗಲೇ ಸಭೆ ಮಾಡುತ್ತಿದೆ. ಹೊಸದಾಗಿ ಸಮೀಕ್ಷೆಯನ್ನೇನೂ ಅವರು ಮಾಡುವುದಿಲ್ಲ. ಅದರಲ್ಲಿ ಏನು ಇದೆ ಅದನ್ನು ಹೇಳಿ ನಮಗೆ ರಿಪೋರ್ಟ್ ಮಾಡುತ್ತಾರೆ. ನಿನ್ನೆ ಹೇಳಿದಂತೆ ಲೋಕಾಯುಕ್ತ ಅಧಿನಿಯಮ ಪ್ರಕರಣ 12(3) ರಡಿ ಸರ್ಕಾರಕ್ಕೆ ಸಲ್ಲಿಸಿದ ವರದಿಯನ್ನು ಪ್ರಕರಣ 12(4) ರಡಿ ಪರಿಶೀಲಿಸಿ ಕ್ರಮ ಜರುಗಿಸುವುದಕ್ಕೆ ಸಕ್ಷಮ ಅಧಿಕಾರಿಗಳಿಗೆ ಮೂರು ತಿಂಗಳ ಕಾಲಾವಕಾಶವಿದೆ. ನಾವು ಈ ಅವಧಿಯೊಳಗೆ ಲೋಕಾಯುಕ್ತರವರ ವರದಿ ಮೇಲೆ ಸೂಕ್ತ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ನೀವು ಒತ್ತಾಯ ಮಾಡುವುದು ನೋಡಿದರೆ ನಿಮಗೇನಾದರೂ ಧರ್ಮಸಿಂಗ್ ಬಗ್ಗೆ, ಆದಷ್ಟು ಬೇಗ ಏನಾದರೂ ಆಗಬೇಕು, ಗುರಿ ಏನಾದರೂ ಬೇರೆ ಇದೆಯಾ ಎಂದು ಅನುಮಾನ ಬರುತ್ತದೆ. ನೀವು ಆ ರೀತಿಯಲ್ಲಿ ಹೇಳಬಾರದಿತ್ತು. ಏಕೆಂದರೆ ಪ್ರಮುಖವಾಗಿ ಅವರು ಹಿಂದಿನ ಮುಖ್ಯಮಂತ್ರಿಗಳು. ಏಕೆ ನೀವು ಒತ್ತಾಯ ಮಾಡುತ್ತೀರಿ? ನಮ್ಮದೇನು ಆಸೆ ಇತ್ತು ಎಂದರೆ ಯಡಿಯೂರಪ್ಪನವರ ಅವಧಿ ಸೇರಿದಂತೆ ಎಲ್ಲವೂ ಬರಲಿ, ಕುಮಾರಸ್ವಾಮಿ ಅವಧಿಯದು, ಹೀಗೆ ಎಲ್ಲ ಅವಧಿಯದ್ದೂ ಬರಲಿ. ಎಲ್ಲರ ಅವಧಿಯಲ್ಲಿ ಏನಾಗಿದೆ ಎಂದು ಬಿಚ್ಚಿಡೋಣ, ಆಮೇಲೆ ತನಿಖೆ ಮಾಡಿಸೋಣ, ಆಮೇಲೆ ಕ್ರಮ ಜರುಗಿಸೋಣವೆಂದು ನಾನು ಅಂದುಕೊಂಡಿದ್ದೆ. ಆದರೆ ನೀವು ನಮ್ಮ ಮೇಲೆ ಬಿದ್ದು ಆಗಲೇಬೇಕು, ಆಗಲೇಬೇಕು ಎಂದರೆ , ಇದು ನನಗೆ ಗೊತ್ತಿಲ್ಲ, ಅನುಮಾನ ಬರುತ್ತದೆ ಜನಗಳಿಗೆ ಎಂದು ನಾನು ನಿಮಗೆ ಹೇಳುತ್ತಿದ್ದೇನೆ. ಇನ್ನು ಲೋಕಾಯುಕ್ತರವರ ವರದಿಯಲ್ಲಿ ಕರ್ನಾಟಕ ಹಾಗೂ ಆಂಧ್ರಪ್ರದೇಶದ ಗಡಿ ಭಾಗದಲ್ಲಿ ಜಂಟಿ ಸರ್ವೆ ಹಾಗೂ ಡೀಮಾರ್ಕೇಶನ್ ಮಾಡಿ ಗಡಿ ಗುರುತಿಸಬೇಕೆಂದು ಮತ್ತು ಈ ಬಗ್ಗೆ ರಾಜ್ಯ ಸರ್ಕಾರ ಕೇಂದ್ರಕ್ಕೆ ವಿನಂತಿ ಮಾಡಬೇಕೆಂದು ಹೇಳಿದ್ದಾರೆ. ಆ ಬಗ್ಗೆ ತಕ್ಷಣ ನಿಯೋಗ ಹೋಗಿ ನಮ್ಮೆಲ್ಲರ ಒತ್ತಾಯವನ್ನು ಅವರ ಮೇಲೆ ತಂದು ಆದಷ್ಟು ಬೇಗ ಜಂಟಿ ಸರ್ವೆ ಮಾಡಿಸಲು ಪ್ರಯತ್ನವನ್ನು ನಾವೆಲ್ಲರೂ ಮಾಡೋಣ. ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳ ನಡುವೆ ಗಡಿ ವಿವಾದ 1970 ರಿಂದ ಇದೆ. ಯಡಿಯೂರಪ್ಪ ಬಂದ ಮೇಲಲ್ಲ. ಈಗಾಗಲೇ ಇದು ಬಗೆಹರಿಯಬೇಕಾಗಿತ್ತು. ಕೇಂದ್ರ ಸರ್ಕಾರದ ಮೇಲ್ವಿಚಾರಣೆಯಲ್ಲಿ ಸರ್ವೆ ಮಾಡಿಸಿ, ಸರ್ವೆ ವರದಿ ಬಂದ ಮೇಲೆ ನಮ್ಮ ಸರ್ಕಾರ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ. ಅನಧಿಕೃತ ಗಣಿಗಾರಿಕೆಯನ್ನು ನಿಯಂತ್ರಿಸುವುದಕ್ಕೋಸ್ಕರ ನಮ್ಮ ಸರ್ಕಾರ ಸಾಕಷ್ಟು ಕ್ರಮವನ್ನು ತೆಗೆದುಕೊಂಡಿದೆ. ಜಿಲ್ಲಾ ಟಾಸ್ಕ್‌ಫೋರ್ಸ್‌ಗಳನ್ನು ರಚನೆ ಮಾಡಿದ್ದೇವೆ.

ಚೆಕ್‌ಪೋಸ್ಟ್‌ಗಳನ್ನು ಸ್ಥಾಪನೆ ಮಾಡಿದ್ದೇವೆ. ಮೊಬೈಲ್ ಸ್ಕ್ವಾಡ್‌ಗಳನ್ನು ರಚನೆ ಮಾಡಿದ್ದೇವೆ. ಈ ರೀತಿ ಹಲವಾರು ಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಒಂದು ಅಂಕಿಅಂಶವನ್ನು ಕೊಟ್ಟರೆ ನಿಮಗೆ ಸಮಾಧಾನವಾಗಬಹುದು ಎಂದು ನನಗೆ ಅನ್ನಿಸುತ್ತಿದೆ. ಆದರೆ ನೀವು ಯಾವ ರೀತಿಯಲ್ಲಿಯೂ ಸಮಾಧಾನವನ್ನೇ ಮಾಡಿಕೊಳ್ಳಬಾರದೆಂದು ತೀರ್ಮಾನ ಮಾಡಿದ್ದರೆ ಅದಕ್ಕೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ಆದರೆ ಕೆಲವರಾದರೂ ನಮ್ಮ ಮೇಲೆ ವಿಶ್ವಾಸ ಇರುವವರು ಆ ಕಡೆಯಲ್ಲಿ ಇದ್ದೀರಿ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಕಳೆದ ನಾಲ್ಕು ವರ್ಷಗಳಿಂದ ಅನಧಿಕೃತ ಗಣಿಗಾರಿಕೆ ಮತ್ತು ಸಾಗಾಣಿಕೆ ತಡೆಯಲು ಯಾವ ಸರ್ಕಾರ ಹೇಗೆ ಪ್ರಯತ್ನ ಮಾಡಿದೆ ಎಂಬ ಬಗ್ಗೆ ಒಂದು ಅಂಕಿ ಅಂಶವನ್ನು ನಾನು ಈಗ ಕೊಡುತ್ತೇನೆ. 2005-06 ರಲ್ಲಿ ದಂಡ ಹಾಕಿ ಸರ್ಕಾರಕ್ಕೆ ಬಂದ ದುಡ್ಡು 6 ಕೋಟಿ 36 ಲಕ್ಷ ರೂ.ಗಳು. 2006-07 ರಲ್ಲಿ ದಂಡ ಹಾಕಿ ಬಂದ ದುಡ್ಡು 7 ಕೋಟಿ 4 ಲಕ್ಷ ರೂ.ಗಳು. 2007-08 ರಲ್ಲಿ ದಂಡ ಹಾಕಿ ಬಂದ ದುಡ್ಡು 22 ಕೋಟಿ 78 ಲಕ್ಷ ರೂ.ಗಳು, 2008-09 ರಲ್ಲಿ ದಂಡ ಹಾಕಿ ಬಂದಿರುವ ಹಣ 51 ಕೋಟಿ 4 ಲಕ್ಷ ರೂ.ಗಳು. ಅಂದರೆ ದೊಡ್ಡ ಪ್ರಮಾಣದಲ್ಲಿ ದಂಡ ವಸೂಲಿ ಮಾಡಿದ್ದೇವೆ. ಆದರೂ ನಮಗೆ ಸಮಾಧಾನವಿಲ್ಲ. ಇದಕ್ಕಿಂತ ನಾಲ್ಕು ಪಟ್ಟು ಜಾಸ್ತಿ ಮಾಡಬೇಕು ಜಯಚಂದ್ರರವರೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನೋಡಿ ರಾಯಲ್ಟಿ ಬಂದಿರುವುದು ಎಷ್ಟು ಗೊತ್ತೆ? 80 ಕೋಟಿ. ಸರಿಯಾಗಿ ದಂಡ ಹಾಕಬೇಕು, ನಮ್ಮ ಅಧಿಕಾರಿಗಳಿಗೆ ಧೈರ್ಯ ಬೇಕಲ್ಲವೆ? ಆ ರೀತಿಯ ವಾತಾವರಣ ಅವರಿಗೆ ಬೇಕಲ್ಲವೆ? ರಾಜಕೀಯ ಮುಖಂಡರುಗಳಾದ ನಾವುಗಳು ಅವರಿಗೆ ಸಹಕಾರ ಕೊಡಬೇಕಲ್ಲವೆ? ಅವರಿಗೂ ಹೆಂಡತಿ ಮಕ್ಕಳು ಇದ್ದಾರೆ. ಇದರ ಬಗ್ಗೆ ನಮ್ಮ ಅಧಿಕಾರಿಗಳಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಇಷ್ಟರಮಟ್ಟಿಗಾದರೂ ಅನಧಿಕೃತ ಸಾಗಾಣಿಕೆಯನ್ನು ಹಿಡಿದು ಐವತ್ತೊಂದು ಕೋಟಿ ದಂಡ ವಸೂಲಿ ಮಾಡಿದ್ದಾರೆ. ಮತ್ತೆ ಈ ವಿವರಗಳನ್ನು ನೋಡಿದರೆ ಹಿಂದಿಗಿಂತ ಏಳೆಂಟು ಪಟ್ಟು ದಂಡ ವಿಧಿಸಿ ಅಕ್ರಮ ಗಣಿಗಾರಿಕೆ ನಡೆಯದಂತೆ ತಡೆಗಟ್ಟುವಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಸುಮಾರು 250 ಕ್ಕೂ ಹೆಚ್ಚು F.I.R. ದಾಖಲೆ ಮಾಡಿ ಅಕ್ರಮ ಗಣಿಗಾರಿಕೆ ಮಾಡುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹಾಕಿದ್ದೇವೆ. ಚಿತ್ರದುರ್ಗ ಜಿಲ್ಲೆಯ ಎರಡು ಗಣಿಗಾರಿಕೆ ಗುತ್ತಿಗೆಯನ್ನು ಸ್ಥಗಿತಗೊಳಿಸಿದ್ದೇವೆ. 9 ಒತ್ತುವರಿ ಪ್ರದೇಶಗಳ ಬಗ್ಗೆ ನೋಟಿಸ್ ಜಾರಿ ಮಾಡಿದ್ದು ನ್ಯಾಯಾಲಯದಿಂದ ಅವರು ತಡೆಯಾಜ್ಞೆ

ತಂದಿದ್ದಾರೆ. ಏಕೆಂದರೆ ಎಷ್ಟೇ ಆಗಲಿ ಅವರು ಪ್ರಭಾವಿಗಳು ತಾನೆ? ಪಟ್ಟಾ ಜಮೀನುಗಳಲ್ಲಿ ನಡೆಯುತ್ತಿದ್ದ ಅಕ್ರಮ ಗಣಿಗಾರಿಕೆಯನ್ನು ಸಂಪೂರ್ಣ ನಿಲ್ಲಿಸುವಂಥ ಪ್ರಯತ್ನವನ್ನು ಮಾಡಿದ್ದೇವೆ. ಕರ್ನಾಟಕ ಸ್ಟೇಟ್ ರಿಮೋಟ್ ಸೆನ್ಸಿಂಗ್ ಏಜೆನ್ಸಿ ಮುಖಾಂತರ ಸ್ಯಾಟಲೈಟ್ ಸರ್ವೆ ಮಾಡಿಸಿ ಇವೊತ್ತು ಒತ್ತುವರಿ ಪ್ರದೇಶವನ್ನು ಗುರುತಿಸಲು ಆದೇಶ ಮಾಡಿದ್ದೇವೆ. ಒಟ್ಟಿನಲ್ಲಿ ನಮ್ಮ ಸರ್ಕಾರ ಗಣಿ ಸಂಪತ್ತನ್ನು ಉಳಿಸುವುದಕ್ಕೆ ಮತ್ತು ಅಕ್ರಮ ಗಣಿಗಾರಿಕೆಯನ್ನು ತಡೆಯುವುದಕ್ಕೆ ಶಕ್ತಿ ಮೀರಿ ಪ್ರಯತ್ನವನ್ನು ಮಾಡುತ್ತಿದ್ದೇವೆ. ಆದುದರಿಂದ ಮಾನ್ಯ ಉಪಾಧ್ಯಕ್ಷರೇ, ನಾವು ಮತ್ತು ನೀವು ಸಿ.ಬಿ.ಐ. ತನಿಖೆ ಎಂದು ಹೇಳುವುದಕ್ಕಿಂತ ಒಟ್ಟಾಗಿ ಹೋಗೋಣ. ನನಗನ್ನಿಸುತ್ತಿದೆ, ನಾವು ಮತ್ತು ನೀವು ಸೇರಿಕೊಂಡು ಪ್ರಾಮಾಣಿಕವಾಗಿ ಪ್ರಧಾನಿಯವರನ್ನು ಭೇಟಿ ಮಾಡಿದರೆ I think within 15 days ಜಾಯಿಂಟ್ ಸರ್ವೆಯಾಗಿ ಸತ್ಯ ಈಚೆಗೆ ಬರಲಿ, ನಾವು ಮತ್ತು ನೀವೆಲ್ಲರೂ ಮುಂದಿನ ಬಜೆಟ್ ಅಧಿವೇಶನದಲ್ಲಿ ಸೇರಿದಾಗ ಕ್ರಮ ತೆಗೆದುಕೊಳ್ಳೋಣ. ಯಾವ ಸಿ.ಬಿ.ಐ. ಬಗ್ಗೆ ವಿಶ್ವಾಸವೇ ಇಲ್ಲವೆಂದು ಹೇಳಿದಂಥ ನೀವು ಈಗ ಸಿ.ಬಿ.ಐ. ಬಗ್ಗೆ ಒತ್ತಾಯ ಮಾಡುವಂಥದ್ದು ಇದ್ದಕ್ಕಿದ ಹಾಗೆ ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಇವೊತ್ತು ನಾನು ನಿಮಗೆ ಹೇಳಿದರೆ ಬೇಸರವಾಗಬಹುದು. ಹಿಂದೆ ಸಿ.ಬಿ.ಐ.ಗೆ ವಹಿಸಿದ ರಾಷ್ಟ್ರದಲ್ಲಿ ನಡೆದ ವಿವಿಧ ಪ್ರಕರಣಗಳ ಬಗ್ಗೆ ಏನಾಗಿದೆ ಸ್ವಾಮಿ? ಹೇಗೆ ಕೇಂದ್ರ ಸರ್ಕಾರ ಸಿ.ಬಿ.ಐ. ಸಂಸ್ಥೆಯನ್ನು ದುರುಪಯೋಗ ಪಡಿಸಿಕೊಂಡಿದೆ ಎಂದು ಹೇಳುವುದಿಲ್ಲ, ಉಪಯೋಗ ಮಾಡಿಕೊಂಡಿದೆ. ಬೋಫೋರ್ಸ್ ಹಗರಣದಲ್ಲಿ ಸಿ.ಬಿ.ಐ. ತನಿಖೆ ಏನಾಯಿತು? ಪ್ರಮುಖ ಆರೋಪಿಯಾದ ಇಟಲಿಯ ಕ್ವಟ್ರೋಚಿಗೆ ಯಾವ ಶಿಕ್ಷೆಯಾಗಿದೆ? ಅವರು ಈಗ ಯಾವ ದೇಶದಲ್ಲಿ ಓಡಾಡುತ್ತಿದ್ದಾರೆ? ಸಿ.ಬಿ.ಐ.ಗೆ ಈ ವಿಷಯ ಗೊತ್ತಿಲ್ಲವೇನು? ಆದುದರಿಂದ ಸಿ.ಬಿ.ಐ.ಗೆ ಕೊಟ್ಟರೆ ಎಲ್ಲವೂ ಸಿಕ್ಕಿಬಿಡುತ್ತದೆ, ಎಲ್ಲವೂ ಸರಿಹೋಗಿಬಿಡುತ್ತದೆ ಎನ್ನುವುದಕ್ಕಾಗುವುದಿಲ್ಲ. ಸಿ.ಬಿ.ಐ.ನಲ್ಲಿಯೂ ವ್ಯವಸ್ಥೆಯನ್ನು ಹಾಳು ಮಾಡಿರುವವರು ನಾವೇ. ಅಲ್ಲಿರುವವರು ಇರಬಹುದು, ಇಲ್ಲಿರುವವರು ಇರಬಹುದು. ಈ ವ್ಯವಸ್ಥೆಗಳು ಕೆಟ್ಟಿರುವುದು ನಮ್ಮಿಂದ ಸ್ವಾಮಿ. ಅದು ಸಿ.ಬಿ.ಐ. ಇರಬಹುದು, ಸಿ.ಓ.ಡಿ. ಇರಬಹುದು, ಅದು ಮತ್ತೊಂದು ಇರಬಹುದು. ನಮ್ಮ ಹಸ್ತಕ್ಷೇಪವಿಲ್ಲದಿದ್ದರೆ ಅವರು ಪ್ರಾಮಾಣಿಕವಾಗಿ ಕೆಲಸವನ್ನು ಮಾಡುತ್ತಾರೆ. ಆದುದರಿಂದ ಕೇಂದ್ರ ಸರ್ಕಾರಕ್ಕೆ ನಾವು ವಿನಂತಿ ಮಾಡಿ ಜಂಟಿ ಸರ್ವೆ ಮಾಡಿಸಿ ನಮ್ಮ ಬಾರ್ಡರ್‌ನ್ನು ಗಟ್ಟಿ ಮಾಡಿಕೊಂಡು ಈ ರೀತಿಯ ಅನಾಹುತ

ಆಗದಂತೆ ತಡೆಯೋಣ. ನಾಳೆಯಿಂದಲಾದರೂ ಈ ರಾಜ್ಯದ ಅಭಿವೃದ್ಧಿ ಬಗ್ಗೆ ಈ ಅಧಿವೇಶನದಲ್ಲಿ, ಮುಂದಿನ ಅಧಿವೇಶನದಲ್ಲಿ ಚರ್ಚೆ ಮಾಡೋಣ. ಸಿ.ಬಿ.ಐ. ತನಿಖೆಗೆ ಕೊಡಲು ಬರುವುದಿಲ್ಲ. ಏಕೆಂದರೆ ಸಿ.ಬಿ.ಐ.ಗೆ ಕೊಡುವ ಪ್ರಶ್ನೆ ಯಾವಾಗ ಬರುತ್ತದೆಂದರೆ ನಮ್ಮ ಕೈಯಲ್ಲಿ ಆಗೋಲ್ಲವೆಂದಾಗ. ಜಂಟಿ ಸರ್ವೆ ಮಾಡಿಸಿ, ಕೇಂದ್ರ ಮಧ್ಯೆ ಪ್ರವೇಶ ಮಾಡಿ, ನಂತರ ನಾವೇನೂ ಮಾಡುವುದ ಕ್ಕಾಗಲಿಲ್ಲವೆಂದಾಗ ನಂತರದಲ್ಲಿ ನಾವು ನೀವು ಒಟ್ಟಾಗಿ ಕುಳಿತು ನಾವು ಏನು ಬೇಕಾದರೂ ಮಾಡೋಣ. ಅಲ್ಲಿಯವರೆವಿಗೆ ಮೊಂಡುತನದಿಂದ ಹೀಗೇ ಆಗಬೇಕೆಂದು ಒತ್ತಾಯ ಮಾಡಬೇಡಿ. ನೀವೂ ಕೂಡ ಹಿಂದೆ ಅಧಿಕಾರ ನಡೆಸಿದ್ದೀರಿ ಸ್ವಾಮಿ. ಕರೀಂಲಾಲ ಹಗರಣದಲ್ಲಿ ಧರಣಿ ಕುಳಿತೆ, ಹೋರಾಟ ಮಾಡಿದೆ, ಆದರೂ ನೀವು ಆಗ ಸಿ.ಬಿ.ಐ. ತನಿಖೆಗೆ ಹಗರಣವನ್ನು ವಹಿಸಲಿಲ್ಲ. ನಾವೇನು ಮಾಡುವುದಕ್ಕಾಗುತ್ತದೆ. ಪ್ರತಿಪಕ್ಷವಾಗಿ ಆಗ ನಾವು ನಮ್ಮ ಕೆಲಸವನ್ನು ಮಾಡಿದ್ದೇವೆ. ಈಗ ಪ್ರತಿಪಕ್ಷವಾಗಿ ನಿಮ್ಮ ಕೆಲಸವನ್ನು ನೀವು ಮಾಡಿದ್ದೀರಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇಲ್ಲಿ ನಡೆಯುವ ಒಂದೊಂದು ಘಟನೆಗಳನ್ನು ನೋಡಬಹುದು. ಆ ಕಾಲದಲ್ಲಿ ಈಗಿರುವ ವ್ಯವಸ್ಥೆ ಇರಲಿಲ್ಲ. ಈಗ ನೋಡಿ ಎಲೆಕ್ಟ್ರಾನಿಕ್ ಮೀಡಿಯಾ ಹೇಗೆ ಕೆಲಸ ಮಾಡುತ್ತಿದೆ. ನಾವು ಕೈ ಮೇಲೇರಿಸಿದರೂ ಜಗತ್ತಿಗೆ ಗೊತ್ತಾಗುತ್ತದೆ. ಆತ್ಮೀಯತೆಯಿಂದ ಇದ್ದರೂ ಗೊತ್ತಾಗುತ್ತದೆ. ಎಲ್ಲವನ್ನೂ ಜನ ನೋಡುತ್ತಿದ್ದಾರೆ. ಜನರು ಮೊದಲಿದ್ದ ಹಾಗೆ ಈಗ ಇಲ್ಲ. ಈಗ ಜಾಗೃತರಾಗಿದ್ದಾರೆ. ಯಡಿಯೂರಪ್ಪ ಏನು ಹೇಳಿದರು, ಖರ್ಗೆಯವರು ಏನು ಹೇಳಿದರು, ಕುಮಾರಸ್ವಾಮಿಯವರು ಏನು ಹೇಳಿದರು, ಜನಾರ್ದನ ರೆಡ್ಡಿ ಏನು ಹೇಳಿದರು, ಇದರಲ್ಲಿ ಎಷ್ಟು ಸತ್ಯ, ಎಷ್ಟು ಅಸತ್ಯವೆನ್ನುವ ಬಗ್ಗೆ ಎಲ್ಲವನ್ನೂ ಜನ ಗಮನಿಸುತ್ತಿದ್ದಾರೆ. ಅದಕ್ಕೋಸ್ಕರ ಈಗ ಹೇಗೂ ಜನತಾ ನ್ಯಾಯಾಲಯದ ಮುಂದೆ ಲೋಕಸಭಾ ಚುನಾವಣೆಗೆ ಹೋಗುತ್ತಿದ್ದೇವೆ. ಈಗಲಾದರೂ ಶಾಂತ ರೀತಿಯಿಂದ ಸಹಕರಿಸಿ ಬರುವಂಥ ಚುನಾವಣೆಗೂ ಮುನ್ನ ರಾಜ್ಯದ ಅಭಿವೃದ್ಧಿ ಬಗ್ಗೆ ಸಲಹೆ ಕೊಡಿ. ಕೆಲಸ ಮಾಡೋಣ, ಚರ್ಚೆ ಮಾಡೋಣವೆಂದು ವಿನಂತಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಈ ಸದನದ ಉಪಯೋಗವನ್ನು ಮಾಡಿಕೊಂಡು ಮೂರ್‍ನಾಲ್ಕು ಮಾತುಗಳನ್ನು ಪ್ರಸ್ತಾಪ ಮಾಡಿದರು. ಒಂದನೆಯದಾಗಿ ವಿರೋಧ ಪಕ್ಷದವರಿಗೆ ಈ ಭಾಗದ ಅಭಿವೃದ್ಧಿ ಬಗ್ಗೆ ಕಾಳಜಿಯಿಲ್ಲ,

ಹೈದರಾಬಾದ್-ಕರ್ನಾಟಕ ಭಾಗದ ಬಗ್ಗೆ ಕಾಳಜಿಯಿಲ್ಲ, ನೀವೇನೋ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡುತ್ತೀರಿ ಎಂದು ಬಂದರೆ ಇಲ್ಲಿ ನೀವು ಧರಣ ಅದೂ ಇದೂ ಮಾಡುತ್ತೀರಿ ಎಂದು ಹೇಳಿದಿರಿ. ಮಾನ್ಯ ಉಪಾಧ್ಯಕ್ಷರೆ, ತಾವೇ ಹೇಳಬೇಕು, ತಾವು ಸಾಕ್ಷಿಯಾಗಿದ್ದೀರಿ. ಯಾವ ಸಂದರ್ಭದಲ್ಲಿ ಈ ಸಮಯ ಇಲ್ಲಿ ವ್ಯರ್ಥವಾಯಿತು? ಎಷ್ಟು ತಾಸು ಇಲ್ಲಿ ನಾವು ಧರಣಿ ಕುಳಿತ್ತಿದ್ದೆವು? ಏಕೆಂದರೆ ರಾಜ್ಯದ ಜನರಿಗೆ ರಾಂಗ್ ಮೆಸೇಜ್ ಈಗ ಹೋಗುತ್ತಿದೆ. ಪದೇ ಪದೇ ಇವರು ಹೇಳುವುದನ್ನು ನೋಡಿದರೆ, ನಾವೇನೋ ಕೆಲಸ ಇಲ್ಲದೇ ಇರುವವರು ಇದ್ದೇವೆ, ಅವರಿಗೆ ಮಾತ್ರ ಕೆಲಸವಿದೆ, ಅವರೊಬ್ಬರೇ ಜನರ ಸಮಸ್ಯೆಗಳಿಗೆ ಪರಿಹಾರ ಕೊಡತಕ್ಕಂಥವರು, ಪ್ರಾಮಾಣಿಕರು. ಬೇರೆಯವರು ಸುಮ್ಮನೆ ಉಡಾಫೆ ಮಾತಾಡಿಕೊಂಡು ಹೋಗುತ್ತಾರೆ ಎನ್ನತಕ್ಕಂಥ ಧಾಟಿಯಲ್ಲಿ ಅವರು ಮಾತನಾಡುತ್ತಾರೆ. ಉಪಾಧ್ಯಕ್ಷರೆ, ಈ ಸದನದಲ್ಲಿ ಸುಮಾರು 11.30 ಕ್ಕೆ ಬಂದು 6.00 ಗಂಟೆಯವರೆವಿಗೂ ಕೂಡ ಸಂಪೂರ್ಣವಾಗಿ 6 ಬಿಲ್‌ಗಳನ್ನು ನಾವು ಪಾಸ್ ಮಾಡಿಕೊಟ್ಟಿದ್ದೇವೆ. ಅದು ಸದನದ ಸದುಪಯೋಗವೋ, ದುರುಪಯೋಗವೋ? ಆಮೇಲೆ ಇನ್ನು ಉಳಿದಂಥವುಗಳಿಗೆ ತಾವು ರಿಪ್ಲೈ ಕೊಡಬೇಕಾಗಿತ್ತು, ಅಷ್ಟರಲ್ಲಿ ಇದು ಬಂತು. ಹಾಗಾದರೆ ಯಾವಾಗ ಸದನದ ದುರುಪಯೋಗವಾಯಿತು? ನಿನ್ನೆ ಇದೇ ಚರ್ಚೆ ನಡೆಯಿತು. ಮೊನ್ನೆ ನಿಮಗೆ ಯಥಾಪ್ರಕಾರ ಚರ್ಚೆ ನಡೆಯಿತು. ಹೀಗೆ ಚರ್ಚೆಗಳೇ ನಡೆದಿರುವಾಗ ಮತ್ತೆ ಅನೇಕ ಕಾಲಿಂಗ್ ಅಟೆನ್‌ಶನ್‌ಗಳನ್ನು ತಾವು ತೆಗೆದುಕೊಂಡು ಅದಕ್ಕೆ ಉತ್ತರವನ್ನು ಕೊಡಲಾಗಿದೆ. ಶೂನ್ಯವೇಳೆ ಅವಧಿಯಲ್ಲಿಯೂ ಕೂಡ ಅನೇಕ ವಿಷಯಗಳ ಬಗ್ಗೆ ಚರ್ಚೆಯಾಗಿದೆ. ಅರೆ ! ತಪ್ಪು ಮಾಡುವವರು ನೀವು. ಆದರೆ ಆ ಚುಕ್ಕೆ ಕೂಡಿಸುವುದು ನಮ್ಮ ಮೇಲೆ. ನೀವು ಅಭಿವೃದ್ಧಿ ಪರ, ನಾವೇನೋ ವಿರೋಧಿಗಳು ಎನ್ನುವ ಹಾಗೆ. ಈಗ ಮಾತನಾಡುವುದಕ್ಕೆ ಬರುತ್ತದೆ ಎಂದು ನೀವು ಭಾವಿಸಿರಬಹುದು.

ಪ್ರಾರಂಭದಲ್ಲಿ ಅವರ sound ಜಾಸ್ತಿ ಇತ್ತು. ಅದಕ್ಕೆ ಹೇಳಿದ್ದು, More sound, less substance. ವಿಷಯಗಳಲ್ಲಿ ಕೊರತೆ ಇದ್ದಾಗ, ಅಥವಾ ಅದರಲ್ಲಿ ಹೇಳುವುದಕ್ಕೆ ಏನೂ ಇಲ್ಲದಿದ್ದಾಗ ಮನುಷ್ಯ ಸ್ವಲ್ಪ sound ಜಾಸ್ತಿ ಮಾಡುತ್ತಾನಂತೆ. ಹಾಗೆ ಅವರು ಧ್ವನಿಯನ್ನು ಜೋರಾಗಿ ಮಾಡಿದರು, ಇದು ಒಂದು. ಇಲ್ಲಿ ಎಲ್ಲರೂ ಕೂಡ ಕೆಲಸ ಮಾಡಬೇಕೆಂದು ಹೇಳಿ ಕುಳಿತು ಚರ್ಚೆ ಮಾಡಿ, ಚರ್ಚೆಯಲ್ಲಿ ಭಾಗವಹಿಸಿ ನಿಮಗೆ ಬಿಲ್ pass ಮಾಡಿ ಕೊಟ್ಟಿದ್ದೇವೆ. ನೀವು ನಮಗೆ thanks ಹೇಳಬೇಕಾಗಿತ್ತು. ನೀವು ಇರಲಿಲ್ಲ, ಏಕೆಂದರೆ ಸುರೇಶ್ ಕುಮಾರ್

ಹಾಗೂ ಆಚಾರ್ಯರವರು ಇದ್ದರು, ಅವರು ಮಾಡಿಕೊಂಡರು. ಇನ್ನು ಎರಡನೆಯದಾಗಿ NDA ಸರ್ಕಾರ ಇದ್ದಾಗ ಇದೇ ಜಸ್ವಂತ್ ಸಿಂಗ್‌ರವರು ಮತ್ತು ಶ್ರೀಮಾನ್ ಅಡ್ವಾಣಿಯವರು ತಮ್ಮ Budget speechನಲ್ಲಿ ಹೇಳಿದ್ದಾರೆ. Stamp paper ಹಗರಣದ ಬಗ್ಗೆ ರಾಜ್ಯ ಸರ್ಕಾರ ಏನು ಕೆಲಸ ಮಾಡಿದೆ, Home Departmentನವರು ಅದನ್ನು ಕಂಡು ಹಿಡಿದು ನಾಸಿಕ್‌ನಿಂದ ತಂದಂತಹ machine ಅನ್ನು ಜಪ್ತಿ ಮಾಡಿಸಿ, ಅವನನ್ನು ಹಿಡಿದುಕೊಂಡು ಬಂದು case ಹಾಕಿಸಿ jailನಲ್ಲಿ ಇಟ್ಟವರು ನಾವು. ಅದು ನನ್ನ ಕಾಲದಲ್ಲಿ ಆಗಿದ್ದು. ಅದಕ್ಕೆ ಮೆಚ್ಚುಗೆಯನ್ನು ಅವರು ತಮ್ಮ Budget speechನಲ್ಲಿ ಒಂದು sentence ಹೇಳಿದ್ದಾರೆ. ಅದನ್ನು ತಾವು ಓದಿ ನೋಡಿ. ಅವರು appreciate ಮಾಡಿದ್ದು, ಇವರಿಗೆ ಸಹನೆಯಿಲ್ಲ. ನೀವೇನು ಮಾಡಿದಿರಿ? ನೀವು CBIಗೆ ಕೊಡುವುದಕ್ಕಿಂತಲೂ ನೀವು ಮಾಡುವಂತಹ ಕೆಲಸವನ್ನು ಮುಂದುವರೆಸಿ ಎಂದು ಅವರು ಬರೆದಿರುವಂತಹ ಪತ್ರವನ್ನು ಸದನದ ಮುಂದೆ ಓದಿದೆ. ತಮಗೆ ನೆನಪು ಇದೆಯೋ ಇಲ್ಲವೋ ತಾವು ಅದನ್ನು ತರಿಸಿಕೊಳ್ಳಿ. ಅವರು ಇದನ್ನು Government of Indiaಗೆ ವಹಿಸುವಂತಹ ಅವಶ್ಯಕತೆ ಇಲ್ಲ, enquiry ನಡೆದಿದೆ, ನೀವೇ ಚೆನ್ನಾಗಿ ನಡೆಸಿ ಎಂದು ಹೇಳಿದರು. ಇದನ್ನು ಹೇಳಿದ ಮೇಲೂ ಕೂಡ CBIಗೆ ನೀವು ಏಕೆ ಕೊಡಲಿಲ್ಲ ಎಂದು ಒಂದು ರೀತಿ ಚುಚ್ಚು ಮಾತು. ಆಗಿನ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೂ ಕೂಡ ಸರಿ ಎನಿಸಿತು, ನೀವು ನಿಮ್ಮ enquiry continue ಮಾಡಿ ಎಂದು ಹೇಳಿದರು. ಇವತ್ತು ಏನು DGP ಇದ್ದಾರೆ, ಆಗ ಆ ಶ್ರೀಕುಮಾರ್‌ರವರೇ ಇದ್ದರು, ಮತ್ಯಾರೂ ಕೂಡ ಇರಲಿಲ್ಲ. ಅವರೇ Special Task Force Director, stamp paper ಹಗರಣದಲ್ಲಿ Commissioner ಆಗಿದ್ದರು. ಇಷ್ಟೆಲ್ಲ ಒಂದು ನೀತಿಯಿಂದ ಮಾಡಿದರೂ ಕೂಡ ನೀವು CBIಗೆ ಏಕೆ ಕೊಡಲಿಲ್ಲವೆಂದರೆ, ದಯವಿಟ್ಟು ಅದರಲ್ಲಿ ಏನಿತ್ತು ಎಂದು ತೆಗೆಯಿರಿ. ಹೋದ ಬಾರಿ ಕೂಡ ಇದೇ ವಿಷಯ ಸದನದಲ್ಲಿ ಬಂದಿತ್ತು. ಆಗ ಆ ಮಹಾರಾಯರು ಇದ್ದರು. ಅವರು ನೀವು ಸೇರಿ ಒಂದು ನಕಲಿ ಸೃಷ್ಟಿ ಮಾಡಿ ನನ್ನನ್ನು ಇಲ್ಲಿ ಕೇಳಿದಿರಿ. ಇಂತಹ ಕುತಂತ್ರದ ಚುಚ್ಚು ಮಾತುಗಳು ಚೆನ್ನಾಗಿರುವುದಿಲ್ಲ. ನೀವು ಏನು ಮಾಡಿದ್ದೇವೆಂದು ನಿಮ್ಮದ್ದನ್ನು ಹೇಳಿಕೊಳ್ಳಿ. ನಾವು ತಪ್ಪು ಮಾಡಿದ್ದರೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ CBI ಏಕೆ ಬೇಕು ಎಂದರೆ ಆಗಬೇಕಾಗಿರಲಿಲ್ಲ, ಈಗ ಬೇಕು. ಈಗ ಏಕೆ ಬೇಕು ಎಂದರೆ ಮಂತ್ರಿಗಳು

involve ಇದ್ದಾರೆ ಎನ್ನುವಂತಹ ಮಾತನ್ನು ಪುಟ 101ರಲ್ಲಿ ಹೇಳಲಿಲ್ಲವೆಂದರೂ ಕೂಡ ಕೊನೆಯ annexureನಲ್ಲಿ ಅವರು ಹೇಳಿದ್ದಾರೆ. ಓಬಳಾಪುರಂ ಕಂಪನಿಯವರು ಈ ರೀತಿಯಾಗಿ encroach ಮಾಡಿದ್ದಾರೆ, ಇಂತಿಂತಹ traders ಹೇಳಿದ್ದಾರೆ ಎನ್ನುವುದನ್ನು ಹೇಳಿದ್ದಾರೆ. ಅದಕ್ಕೆ enquiry ಆಗಬೇಕು ಎನ್ನುವ ಮಾತನ್ನು ಕೂಡ ಅವರೇ page number 126 ಮತ್ತು 127ನಲ್ಲಿ ಹೇಳಿದ್ದಾರೆ. ನೀವು ಓದಿದ್ದು page number 101. ಇದನ್ನು annexureನಲ್ಲಿ ಹೇಳಿದ್ದಾರೆ. ಅವರು ಅಂಥಾದ್ದನ್ನು ಹೇಳಲ್ಲ, ಅವರು ಏನು ಹೇಳಬೇಕು, ಏನು ಹೇಳಬಾರದು, ತೊಂದರೆ ಆಗುವುದೆಲ್ಲಾ ನನಗೆ ಹೇಳಿಕೊಡಬೇಡಿ ಎಂದು ಮೊದಲೇ ಹೇಳಿರುತ್ತಾರೆ. ಅವರು ಅದನ್ನು ಅದೇ ರೀತಿ ಮಾಡಿಕೊಂಡು ಬರುತ್ತಾರೆ. ಅದನ್ನು ಅವರು ನೋಡಲಿಲ್ಲ. ಯಡಿಯೂರಪ್ಪ 200 ಕೋಟಿ 300 ಕೋಟಿ ರೂಪಾಯಿ ತಿಂದರು ಎಂದು ನಾವು ನಿಮ್ಮ ಮೇಲೆ ಆಪಾದನೆ ಮಾಡಿದೆವಾ? Report ಇವತ್ತು ಬಂದಿದೆ. ಇವತ್ತು ನೀವು Act ಮಾಡಿಲ್ಲ. ಅದಕ್ಕೆ ನಮ್ಮ ಆಪಾದನೆ. ಈಗ ಕೊಲಿ ಮಾಡಿದ ಒಬ್ಬ ಮನುಷ್ಯನಿಗೆ ಏನು ಶಿಕ್ಷೆ ಕೊಡುತ್ತಾರೋ, ಅದೇ ರೀತಿ ಸುಮ್ಮನೆ ಕುಳಿತಿರುವ ವ್ಯಕ್ತಿಗೂ abettor ಎಂದು ಹೇಳಿ ಅವನಿಗೂ ಕೂಡ ಶಿಕ್ಷೆ ಆಗುತ್ತದೆ. ಸ್ವಾಮಿ, abettor ಕೆಲಸ ಮಾಡಬೇಡಿ. ಯಾರು ತಪ್ಪು ಮಾಡಿದ್ದಾರೋ ಅವರಿಗೆ ಶಿಕ್ಷೆ ಕೊಡುವುದಕ್ಕೆ CBIಗೆ ಒಪ್ಪಿಸಿಬಿಡಿ. ನೀವು ನಮಗೆಲ್ಲ ಏನು ತೋರಿಸಬೇಕು? ಧರ್ಮಸಿಂಗ್ ನೋಡಿ, ನಿಮ್ಮ ಮಾಜಿ ಮುಖ್ಯಮಂತ್ರಿಗಳಿದ್ದಾರೆ, ಕುಮಾರಸ್ವಾಮಿಯವರು ಇದ್ದಾರೆ ಎಂದು ಅವರನ್ನು ತೋರಿಸಿ ನಮ್ಮನ್ನು ಹೆದರಿಸಬೇಕೆಂದು ಮಾಡಿದ್ದೀರಾ? ಅಥವಾ ಅದರಿಂದ ಪಕ್ಷದ ನಮ್ಮ ತೇಜೋವಧೆ ಮಾಡಬೇಕು ಎಂದು ಮನಸ್ಸಿನಲ್ಲಿ ಇಟ್ಟುಕೊಂಡು ಅವರ ಹೆಸರು ಪದೇಪದೇ ಪ್ರಸ್ತಾಪ ಮಾಡುತ್ತಿದ್ದೀರಾ? ಅವರು ಸ್ಪಷ್ಟವಾಗಿ ತಮ್ಮ ಭಾಷಣದಲ್ಲಿ, press conferenceನಲ್ಲಿ ಹೇಳಿದ್ದಾರೆ. High Courtನಿಂದ direction ಬಂತು. ನಾನೇನು ಕೊಟ್ಟಿದ್ದೇನೆ, ನಾನು ಏಕೆ refer ಮಾಡಿದ್ದೇನೆ ಎನ್ನುವುದನ್ನು ಅವರು ಹೇಳಿದ್ದಾರೆ. ಆದರೆ ಅದೆಲ್ಲಾ illegal ಎಂದು ತಿಳಿದುಕೊಳ್ಳೋಣ. CBI ಗೆ refer ಮಾಡಿ. ಬೇರೆಯವರಿಗೆ ಆದ ಹಾಗೆ ಅವರಿಗೂ ಕೂಡ ಶಿಕ್ಷೆ ಆಗುತ್ತದಲ್ಲ? ಓಬಳಾಪುರಂದು ಮಾಡಿ. ಅದರ ಜೊತೆಯಲ್ಲಿ illegal ಆಗಿ ಮಾಡುತ್ತಿರುವುದನ್ನು ban ಮಾಡಿ ಎಂದು ನಾವು ಕೇಳಿದೆವು. ಅದಕ್ಕೆ ಏನೂ ಉತ್ತರ ಇಲ್ಲ. ಅದೇ ರೀತಿಯಾಗಿ registration ನಿಲ್ಲಿಸಿ ಎಂದು ಹೇಳಿದೆವು. ಅದಕ್ಕೂ ತಾವು

ಏನೂ ಹೇಳಲಿಲ್ಲ. CBIಗೆ refer ಮಾಡಿ ಎಂದರೆ Joint Select Committee ಎಂದು ಹೇಳುತ್ತೀರಿ. Joint Select Committee ಯಿಂದ ಏನಾಗುತ್ತದೆ ಸ್ವಾಮಿ? ನಾಳೆ ನಾವು ಇರುತ್ತೇವೆ, ಸಲಹೆ ಕೊಡುತ್ತೇವೆ. ಲೋಕಾಯುಕ್ತ ಸಲಹೆ ಅಲ್ಲದೆ, ಮತ್ತೆ ನಾವು ಆರು ತಿಂಗಳು, ಒಂದು ವರ್ಷ ಸಮಯ ತೆಗೆದುಕೊಂಡು Joint Select Committee report ಕೊಟ್ಟು ಅದನ್ನು ಹೌದು ಇಲ್ಲ ಎಂದು ಹೇಳುವುದು. ಅದರ ಮೇಲೆ charge sheet ಹಾಕುವುದಕ್ಕೆ ಬರುತ್ತದೆ ಏನು? Maximum ನೀವು ಹೇಳಿದ ಹಾಗೆ ಹೊಸ guidelines fix ಮಾಡಬಹುದು. ಅದಕ್ಕೆ, ಇದಕ್ಕೆ ಒಂದು ಪರಿಹಾರ ಏನೆಂದರೆ ಇದರಲ್ಲಿ ಎಲ್ಲರ ಸಂಶಯ ದೂರವಾಗಲಿ. ಇದರಲ್ಲಿ ನಿಮ್ಮದು ಏನು involvement ಇಲ್ಲ, ನಿಮ್ಮದು ಏನೂ ತೊಂದರೆ ಇಲ್ಲ, ನಿಮ್ಮ ಕಾಲದಲ್ಲಿ ನೀವು ಒಂದು ಕೂಡ ಕೊಟ್ಟಿಲ್ಲ. ಇದೆಲ್ಲಾ ಸತ್ಯ ಇದ್ದಮೇಲೆ ಯಾರೋ ಬೇರೆಯವರಿಗೆ ಶಿಕ್ಷೆಯಾಗಲಿ ಬಿಡಿ. ನಿಮಗೆ ಏಕೆ ನಮ್ಮ ಕಾಂಗ್ರೆಸ್‌ನವರ ಬಗ್ಗೆ ಅಥವಾ ಕುಮಾರಸ್ವಾಮಿಯವರ ಬಗ್ಗೆ ಕಾಳಜಿ, ಕಳಕಳಿ ಇದೆ? ಮೂರನೆಯದಾಗಿ ಪದೇ ಪದೇ ಚುಚ್ಚಿ ಹೇಳುವುದು. ಕೇಂದ್ರ ಸರ್ಕಾರ ಏನು ಮಾಡುತ್ತದೆ? ಇದೆಲ್ಲಾ ಮಾಡಬೇಕಲ್ಲ? ಐದು ವರ್ಷದಲ್ಲಿ NDA ಸರ್ಕಾರ ಮಾಡಿತ್ತಾ? ಯಾವ ಸರ್ಕಾರ ಇದ್ದರೂ ಕೂಡ ಯಾವ ಸಂದರ್ಭದಲ್ಲಿ ಈ cases ಬರುತ್ತವೆ, ಆಗ ಎಚ್ಚರ ಆಗುತ್ತಾರೆ, ಹೇಳುತ್ತಾರೆ. ಎಲ್ಲರಿಗೂ ಈಗ ಗೊತ್ತಾಯಿತು ಅಲ್ಲಿ borderನಲ್ಲಿ ಕಲ್ಲು ಹೊಡೆದಿದ್ದಾರೆ, ಅಲ್ಲಿ extend ಮಾಡಿದ್ದಾರೆ ಎನ್ನುವುದು ಆಪಾದನೆ, ಮಾತುಗಳ ಸುರಿಮಳೆ ಬಂದಾಗ ಈ ಪ್ರಶ್ನೆ ಉದ್ಭವಿಸಿತು. ನಂತರ 2007ರಲ್ಲಿ ಆ ಕಂಪನಿಯವರು ವಹಿಸಿಕೊಂಡ ಮೇಲೆ ಈ ಪ್ರಶ್ನೆ ಬಂತು. 2003ರಲ್ಲಿ ಏಕೆ ಮಾಡಲಿಲ್ಲ, 2004ರಲ್ಲಿ ಏಕೆ ಮಾಡಲಿಲ್ಲ, 2005ರಲ್ಲಿ ಏಕೆ ಮಾಡಲಿಲ್ಲವೆಂದರೆ ಏನು? ಯಾವಾಗ cause of action ಇರುತ್ತದೋ ಆಗ ಸಹಜವಾಗಿ ನಿಮ್ಮ ಮುಂದೆ ಇಡತಕ್ಕಂಥಾದ್ದು, ಕೇಳತಕ್ಕಂಥಾದ್ದು ಇರುತ್ತದೆ. ಆಗ ಅದಕ್ಕೂ ಕೂಡ ನೀವು, "ಇಲ್ಲಾ ನಾನೇನು ಮಾಡಿಲ್ಲ, ನಾನು ಸತ್ಯವಾಗಿ ಇದ್ದೇನೆ" ಎಂದು ಹೇಳುವುದು. ಹೌದು, ನೀವು ಹರಿಶ್ಚಂದ್ರ ಇರಬಹುದು, ಅವರ ಮೊಮ್ಮಗನೂ ಇರಬಹುದು. ಆದರೆ ನಾನು ಇಲ್ಲಿ ಕೇಳುತ್ತಿರತಕ್ಕಂಥಾದ್ದು ಏನೆಂದರೆ ನೀವು ನ್ಯಾಯವಾಗಿ refer ಮಾಡಿ. ನಿಮ್ಮದು involvement ಏನೂ ಇಲ್ಲ. ನೀವು ಯಾರಿಗೂ ಕೊಟ್ಟಿಲ್ಲ. ನೀವು ಒಂದು application ಕೂಡ entertain ಮಾಡಿಲ್ಲ. ಒಂದು renewal

ಮಾಡಿಲ್ಲ. ಹಾಗಿದ್ದ ಮೇಲೆ ಹೆದರಿಕೆ ಏಕೆ? ನಿಮಗೆ ಹೆದರಿಕೆ ಇದೆಯೆಂದು ನಾನು ಹೇಳುವುದಿಲ್ಲ. ಆದರೆ ಸತ್ಯಾಂಶ ಹೊರಗಡೆ ಬರಲಿ ನೋಡೋಣ. ಅದನ್ನು ಸೇರಿಸಿಕೊಂಡೇ ಅವರು enquiry ಮಾಡಲಿ. ಅವರು refuse ಮಾಡಿದರೆ Government of India refuse ಮಾಡಿದೆ, ನಾವೇನು ಮಾಡಲಿ, ಅದು ನಿಮ್ಮ ಹಣೆಬರಹ, ನಾನು Joint Select Committee ಮಾಡುತ್ತೇನೆ ಎಂದು ಹೇಳಲಿ. ಅಥವಾ ಬೇರೆ ಬೇರೆ ವಿಧಾನಗಳನ್ನು ಹುಡುಕೋಣ. ಇದು interstate dispute ಇದ್ದಕಾರಣ, border disputeನ involvement ಇದ್ದಕಾರಣ, ಮಂತ್ರಿಗಳ ಹೆಸರು ಬಂದ ಕಾರಣ, ಮಾಜಿ ಮುಖ್ಯಮಂತ್ರಿಗಳ ಹೆಸರನ್ನು ನೀವು ಪದೇ ಪದೇ ಹೇಳುತ್ತಿರುವ ಕಾರಣ ಮತ್ತು ಅನೇಕ IAS, IPS ಅಧಿಕಾರಿಗಳು ಇದರಲ್ಲಿ involve ಆಗಿದ್ದಾರೆ ಎನ್ನುವ ಕಾರಣ, ಅನೇಕ ಅರಣ್ಯ ಇಲಾಖೆಯ IFS ಅಧಿಕಾರಿಗಳು involve ಆಗಿದ್ದಾರೆ ಎಂದರೆ, ಅವರೆಲ್ಲರ ಮೇಲೆ ಕ್ರಮವನ್ನು ಜರುಗಿಸಬೇಕೆಂದರೆ CBI enquiry ಸೂಕ್ತ ಎಂದು ನಾವು ಹೇಳುತ್ತಿರುವುದು. ನೀವು ಸಾರಾಸಗಟಾಗಿ ಅವರದು ಏನಾಯಿತು, ಇವರದು ಏನಾಯಿತು ಎಂದು ಹೇಳಿಕೊಂಡು ಪಲಾಯನ ಆಗುವಂಥಾದ್ದಲ್ಲ. ಅದಕ್ಕೆ ನೀವು ಈ ಮೂರು ವಿಚಾರಗಳನ್ನು ಮಾಡಬೇಕು. ಒಂದು CBI enquire ಮಾಡಿಸಿ, ಎರಡನೆಂಯುದಾಗಿ illegal ಆಗಿ ಮಾಡುತ್ತಿರುವುದನ್ನು ban ಮಾಡಿಸಿ, ಮೂರನೆಯದಾಗಿ registration stop ಮಾಡಿಸಿ. ನಾವು ಹೇಳುವುದೇನೆಂದರೆ CBI enquiry ಆಗುವವರೆಗೆ ತಾವು ಅವರಿಗೆ ಮುಕ್ತಿ ಕೊಡಿ. ಅಲ್ಲಿ ಪುನಃ CBI enquiry ಯಲ್ಲಿ ದೋಷಮುಕ್ತರಾದರೆ ಆಗ reinstate ಮಾಡಿ, ಮತ್ತೊಂದು ಏನು ಮಾಡುತ್ತೀರೋ ಮಾಡಿ. ಅವರು ಇನ್ನೊಂದು ಮಾತು ಹಿಂದೆ ನೀವೇನು ಹೋಗಿದ್ದೀರಾ ಎಂದು ಕೇಳಿದರು. ನಾವೂ ಕೂಡ ಹೋಗಿದ್ದೇವೆ. 150 ಕೋಟಿ ರೂಪಾಯಿ ವಿಚಾರದಲ್ಲಿ ನೀವಿಬ್ಬರು ಇದ್ದಾಗಲೇ ನಾವು Prime Minister, President of India ಅವರೆಲ್ಲರ ಕಡೆ ಹೋಗಿ CBIಗೆ refer ಮಾಡಿ ಅಥವಾ ನೀವೇ interfere ಮಾಡಿ ಮನವಿ ಎಂದು ಕೊಟ್ಟಿದ್ದೇವೆ. ಆಗ ಆಗಲಿಲ್ಲ. ನಾವು ಒಪ್ಪಿಕೊಂಡಿದ್ದೇವೆ. ನಾವು ಪ್ರಯತ್ನ ಮಾಡಿಲ್ಲವೆಂದು ನೀವು ಹೇಳಬೇಡಿ. ನಿಮ್ಮ ಕಾಲದಲ್ಲಿ ಕೂಡ ಪ್ರಯತ್ನ ಮಾಡಿದ್ದೇವೆ. ಪ್ರತಿಯೊಂದು ಮಾತಿಗೂ ಕೂಡ ಕುಮಾರಸ್ವಾಮಿ ಹಾಗೆ ಮಾಡಿದರು ಎಂದು ಹೇಳುವುದು. ಸ್ವಾಮಿ, ಆ 20 ತಿಂಗಳು ನಿಮ್ಮಿಬ್ಬರದು joint

responsibility ಇರುತ್ತದೆ. ಆ ಸರ್ಕಾರ ಇದ್ದಾಗ ಏನೇ ಮಾಡಿದರೂ ಕೂಡ ಆ ಸರ್ಕಾರದ ಕೆಲಸ ಅದು. ಅದಕ್ಕೆ ನಾನು ಈಗಾಗಲೆ ಹೇಳಿದೆ, ಒಳ್ಳೆಯದಾದರೆ ನಮ್ಮದು, ಕೆಟ್ಟದಾದರೆ ನಿಮ್ಮದು ಎಂದು ಹೇಳಬೇಡಿ. ನಿಮ್ಮಿಬ್ಬರದು ಜವಾಬ್ದಾರಿ. ಅದಕ್ಕೆ ನೀವು ಏಕೆ ತಪ್ಪಿಸಿಕೊಳ್ಳುತ್ತೀರಿ?

ಅಲ್ಲಿ ಏನಾದರೂ ಇದ್ದರೆ ನೀವು ಹೋಗಿ ಭಾಗಿಗಳಾಗಿ, ಅದಕ್ಕೇನು? ಏನಾದರೂ ಪಾಲು ಸಿಗಲಿಲ್ಲವೆಂದರೆ ಜಗಳ ಆಡಿರುತ್ತಾರೆ. ಅದು ಏನೂ ಇಲ್ಲ. ಅದಕ್ಕಾಗಿ ನೀವು ನಿಷ್ಪಕ್ಷಪಾತವಾಗಿ ಮಾಡಬೇಕೆಂದರೆ ಅದನ್ನು ನೀವು ಮಾಡಬಹುದು. ಆದರೆ ಇವತ್ತು ಚುಚ್ಚಿ ಮಾತನಾಡುವಂಥಾದ್ದು, ನಿಮ್ಮ ಕಾಲದಲ್ಲಿ ಹೀಗೆ ಆಯಿತೆಂದು ಹೇಳುವುದು ಸರಿಯಲ್ಲ. ನಾನು ಹೇಳುವುದೇನೆಂದರೆ ಇದು ನಿಮ್ಮ 27 ತಿಂಗಳುಗಳಲ್ಲಿ ಆಗಿದ್ದು. ಇದು 8 ತಿಂಗಳೇ, ಹಿಂದಿನ 20 ತಿಂಗಳು ನೀವು ಕೂಡ ಹೊಣೆಗಾರರಾಗಿದ್ದೀರಿ. ಅದನ್ನು ಬಿಟ್ಟು ಪದೇ ಪದೇ ನಮ್ಮ ಜವಾಬ್ದಾರಿನೇ ಇಲ್ಲ. ನೀವೇ ಎಲ್ಲಾ ಮಾಡಿಕೊಂಡು ಮಾಡುತ್ತಿದ್ದೀರೆಂದು ಹೇಳುವಂಥಾದ್ದು ಸರಿಯಲ್ಲ, ಸಮಂಜಸವೂ ಅಲ್ಲ. ಇದರ ಬಗ್ಗೆ ನಾನು enquiry ಮಾಡಿ ಎಂದು ಹೇಳುತ್ತಾ ಇದ್ದೇನೆ. ನಾನು ಪುನಃ insist ಮಾಡುತ್ತಿದ್ದೇನೆ. ದಯವಿಟ್ಟು CBI enquiry ಮಾಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು :- ಈಗ ಚರ್ಚೆಯನ್ನು ಮುಗಿಸೋಣ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೆ, ನಾನು ಎರಡು, ಮೂರು clarification ಕೇಳುವುದಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾವು Joint Select Committeeಗೆ ಒಪ್ಪುವುದಿಲ್ಲ. ಇದನ್ನು CBIಗೆ ವಹಿಸಿಕೊಡಿ.

ಡಾ॥ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಉಪಾಧ್ಯಕ್ಷರೆ, ...

ಶ್ರೀ ಹೆಚ್.ಡಿ. ರೇವಣ್ಣ :- ಸಾರ್, ನಾನು ಎರಡೇ ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಎಲ್ಲದಕ್ಕೂ ಒಟ್ಟಿಗೆ ಉತ್ತರವನ್ನು ಹೇಳಿಬಿಡಿ.

ಡಾ॥ ಬಿ.ಎಸ್. ಯಡಿಯೂರಪ್ಪ :- ನಾನು ನಿಮಗೆ ಮಾಹಿತಿಯನ್ನು ಕೊಡುತ್ತಿದ್ದೇನೆ. ನಾನು ನೀವು ಮಾತನಾಡುವಾಗ ಮಧ್ಯದಲ್ಲಿ ಮಾತನಾಡುವುದಿಲ್ಲ. ನಿಮ್ಮ ಮಾತನ್ನು ಕೇಳದೇ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ

ಸ್ಥಾನಕ್ಕಾದರೂ ಗೌರವ ಬೇಕಲ್ಲಾ? CBI Joint survey ಮಾಡುವುದಕ್ಕೆ ಬರುವುದಿಲ್ಲ. ಅದುದರಿಂದ Survey of Indiaಕ್ಕೆ survey ಮಾಡುವುದಕ್ಕೆ refer ಮಾಡುವ ವಿಷಯವಾಗಿ, ನನಗೆ ನಿಮ್ಮಿಂದ ಒಂದು ಉತ್ತರ ಬೇಕು. ನಾನು ವಿನಯಪೂರ್ವಕವಾಗಿ ಕೇಳುತ್ತೇನೆ. ಈ ಅಧಿವೇಶನ ಮುಗಿದ ತಕ್ಷಣ ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ಜಂಟಿ ಒಂದು ತನಿಖೆಯಾಗಬೇಕು, ಸರ್ವೆ ಆಗಬೇಕೆಂದು ಹೇಳುವುದಕ್ಕೆ ಹೋಗೋಣ. ತಾವು ಬರುತ್ತಿರೋ,ಇಲ್ಲವೋ? ಎಂಬುದು ಒಂದು, ಎರಡನೆಯದಾಗಿ 109 ಜನರ ಬಂಧು, ಬಳಗ ಇವರೆಲ್ಲರ address ಪೂರ್ತಿ ಸಿಗಬೇಕೆಂದು ಇದೆ. ಅದಕ್ಕೋಸ್ಕರ ಒಂದು ಜಂಟಿ ಸದನ ಸಮಿತಿಯನ್ನು ಮಾಡಿ ಲೈಸೆನ್ಸ್ ಕೊಟ್ಟಂತಹ ಈ 109 ಜನ ಗುತ್ತಿಗೆದಾರರು ಯಾರು? ಇದರ renewal ಆಗಿದೆಯೇ? ಈ ವಿವರಕ್ಕೆ ಜಂಟಿ ಸದನ ಸಮಿತಿಗೆ ನಿಮ್ಮ ಒಪ್ಪಿಗೆ ಇದೆಯೋ,ಇಲ್ಲವೋ? ಎಂದು ಹೇಳಿ. Mining stop ಮಾಡುವುದಕ್ಕೆ ನಮ್ಮ ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ. ತಾವು ಹಿರಿಯರಿದ್ದೀರಿ, ನಿಮಗೆ ಗೊತ್ತಿದೆ. ಅದಕ್ಕೆ ಇರುವುದೊಂದೇ ಮಾರ್ಗ, ಕೇಂದ್ರ ಸರ್ಕಾರದ ಬಳಿ ಹೋಗಿ ಜಂಟಿ ಸರ್ವೆ ಆಗುವಂತೆ ಮಾಡಿದರೆ, ಪರಿಹಾರ ಸಿಗುತ್ತದೆ. ತಾವು ದಯಮಾಡಿ ಒಪ್ಪಿಕೊಳ್ಳಿ. ತಾವು ಯಾವ ದಿನವೆಂದು date fix ಮಾಡಿ. ಮಾನ್ಯ ಕುಮಾರ ಸ್ವಾಮಿಯವರರೆ, ಮಾನ್ಯ ರೇವಣ್ಣನವರೆ ಬರುತ್ತೀರಾ?

ಶ್ರೀ ಹೆಚ್.ಡಿ. ರೇವಣ್ಣ :- ತಾವು ಎಲ್ಲಿಗೆ ಕರೆದರೂ ಬರುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- Land dispute ಇದ್ದರೆ CBI ನವರು ಅವರಿಗೆ direction ಕೊಡುತ್ತಾರೆ. ಈಗ Government of India, Survey Department ಅನ್ನು CBI ಉಪಯೋಗ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲವಾ? ನಮಗೆ requisition ಕೊಟ್ಟು ಇಂತಿಂಥಾದ್ದು dispute ಇದೆಯೆಂದು ತಿಳಿಸಿ Please refer it, ಸರ್ವೆ ಮಾಡಿ, report ತರಿಸಿಕೊಳ್ಳುತ್ತಾರೆ. ಅದನ್ನು ಬಿಟ್ಟು ನೀವು ಕರೆದುಕೊಂಡು ಹೋಗುವುದು. ಅಲ್ಲಿ ನೋಡಿ ಏನೂ ಆಗುವುದಿಲ್ಲವೆಂದು ಹೇಳುವುದು. ಅಲ್ಲಿ ಆಗದೇ ಹೋದರೆ ನಮ್ಮ ಮೇಲೆ charge ಮಾಡುವುದಕ್ಕೆ ಅವಕಾಶವನ್ನು ಹುಡುಕುತ್ತಿದ್ದೀರಿ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ದಯಮಾಡಿ ಇವೆಲ್ಲಕ್ಕೂ ಕೂಡ ಒಂದೇ ಒಂದು ಮದ್ದು ಎಂದರೆ CBI ತನಿಖೆ ಮಾಡಿಸುವುದು, ಅದಕ್ಕೆ ನೀವು ಒಪ್ಪಿಕೊಳ್ಳಿ.

ಶ್ರೀ ಸಿ.ಎಂ. ಉದಾಸಿ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುವಾಗ ಆವಾಗ CBI ತನಿಖೆಗೆ ಏಕೆ ಕೊಡಲಿಲ್ಲವೆಂದರೆ ನಮ್ಮ ರಾಜ್ಯ ಸರ್ಕಾರದಲ್ಲಿದ್ದಂಥ ಅಧಿಕಾರಿಗಳೇ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆಂಬ ಕಾರಣದಿಂದ ಅವರೇ ಮುಂದುವರೆಯಲಿ ಎಂದು ಹೇಳಿದ್ದರು. ಆಗ ಅವರೇ ಅಧಿಕಾರಿಗಳಿಂದ ಕೆಲಸವಾಗಲಿ ಎಂದು ಹೇಳಿ, ಇವತ್ತು ಏಕೆ ಅದನ್ನು ಬೇಡವೆಂದು ಹೇಳುತ್ತಿದ್ದಾರೆಂದು ಅರ್ಥವಾಗುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇದು criminal case ಅಲ್ಲ, ಇದು ಗಣಿ ಕೇಸ್.

ಶ್ರೀ ಸಿ.ಎಂ. ಉದಾಸಿ :- ಅದು ತಮಗೆಲ್ಲಾ ಗೊತ್ತಿದೆ. ಛಾಪಾ ಕಾಗದದ ಕೇಸ್ ಇಡೀ ರಾಷ್ಟ್ರವ್ಯಾಪಿಯಾಗಿರುವಂಥ ಕೇಸ್ ಅದು. ಈಗ ನಾವು ರಾಜ್ಯಕ್ಕೆ ಸೀಮಿತವಾಗಿ ಮಾತನಾಡುತ್ತಿದ್ದೇವೆ. ರಾಷ್ಟ್ರಕ್ಕೆ ಸಂಬಂಧಪಟ್ಟ ಸಮಸ್ಯೆ ಇದ್ದಾಗಲೂ ಸಹಿತ ಅದಕ್ಕೆ ಆಕ್ಷೇಪ ಮಾಡಿದ್ದೀರಿ. ಆದರೆ ಆಗ ಅಧಿಕಾರಿಗಳ ಬಗ್ಗೆ ಹೊಗಳಿದವರು ಈಗ ಏಕೆ ಆಕ್ಷೇಪ ಮಾಡುತ್ತಿದ್ದೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇಡೀ ರಾಷ್ಟ್ರಕ್ಕೆ ನಮ್ಮಿಂದ ಸಿಕ್ಕಿತು. ನಾವು ಹಿಡಿದುಕೊಂಡು ಬರುವುದರಿಂದ ಅದನ್ನು ನೀವು ನೆನಪಿನಲ್ಲಿಟ್ಟು ಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೆ: ನಾನು ತೆಲಗಿ ಕೇಸ್‌ಗೆ ಸಂಬಂಧಪಟ್ಟಂತೆ ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಮಾನ್ಯ ಉದಾಸಿಯವರಿಗೆ ತೆಲಗಿ ಕೇಸ್ ಬಗ್ಗೆ interestನಲ್ಲಿದ್ದಾರೆ. ಅದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ದಯಮಾಡಿ ಅದಕ್ಕೆ ಒಂದು ಅವಕಾಶವನ್ನು ಕೊಡಿ. ಇದು ಮಾನ್ಯ ಮುಖ್ಯಮಂತ್ರಿಯವರು ತೆಲಗಿ ಕೇಸ್‌ನಲ್ಲಿ interest ಇದ್ದಾಗ, ..ನೀವು ತೆಲಗಿ ಕೇಸ್‌ನಲ್ಲಿ interest ಇದ್ದಾಗ ಹೇಳಬೇಕಾಗುತ್ತದೆ. ನಾನು ಇಲ್ಲಿ ತೆಲಗಿ ಕೇಸ್ ಬಗ್ಗೆ ಚರ್ಚೆಗೆ ಬಂದಾಗ ನಾನು ಹೇಳಬೇಕಾಗುತ್ತದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ಮಾನ್ಯ ಉಪಾಧ್ಯಕ್ಷರೆ, ಪಕ್ಷಕ್ಕೆ ನಾಯಕರನ್ನು ಮಾಡಿಕೊಂಡಿರುತ್ತೀರಿ. ಇಲ್ಲಿ ಈಗ ಮಾನ್ಯ ಕುಮಾರಸ್ವಾಮಿ ನಾಯಕರೋ? ಮಾನ್ಯ ರೇವಣ್ಣನವರು ನಾಯುಕರೋ? ಒಂದು ಪಕ್ಷದಲ್ಲಿ ಮಾನ್ಯ ಮಲ್ಲಿಕಾರ್ಜುನ

ಖರ್ಗೆಯವರು ಪಕ್ಷದ ಪರವಾಗಿ ಮಾತನಾಡುತ್ತಾರೆ. ಅದೇ ರೀತಿಯಲ್ಲಿ ಮಾನ್ಯ ಕುಮಾರ ಸ್ವಾಮಿಯವರು ಮಾತನಾಡಬೇಕು, ಇಲ್ಲ ಮಾನ್ಯ ರೇವಣ್ಣನವರು ಮಾತನಾಡಬೇಕು.

ಶ್ರೀ ಹೆಚ್.ಡಿ. ರೇವಣ್ಣ :- ನಾನು ಚರ್ಚೆಯಲ್ಲಿ ಭಾಗವಹಿಸಿರುವುದರಿಂದ ಸನ್ಮಾನ್ಯ ಮುಖ್ಯಮಂತ್ರಿಯವರು ನನ್ನ ಮೇಲೆ ಒಂದೆರಡು ಆಪಾದನೆಗಳನ್ನು ಮಾಡಿದರು. ನಾನು ಹೇಳುವಂಥಾದ್ದು ನನ್ನ ಕರ್ತವ್ಯವಿದೆ. ನಾನು ಸದನಕ್ಕೆ ಹೇಳುವುದರಲ್ಲಿ ಏನಾದರೂ ವಿಫಲನಾದರೆ ನಾಳೆ ದಿವಸ ಸಾರ್ವಜನಿಕವಾಗಿ ಆಪಾದನೆಗೆ ಗುರಿಯಾಗಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಅವರ ಮಂತ್ರಿಗಳು ಮೇಲ್ಮನೆಯಲ್ಲಿ ಹೇಳಿದ್ದಾರೆ, ಮಾನ್ಯ ಕುಮಾರಸ್ವಾಮಿಯವರ ಕಾಲದಲ್ಲಿ ಶಿಫಾರಸ್ಸು ಆದ ಕೆಲವು ಜೆ.ಡಿ.(ಎಸ್) ಮುಖಂಡರಿಗೆ ನೀಡಿದ ಅನುಮತಿಯನ್ನು ಮಾನ್ಯ ರಾಜ್ಯಪಾಲರ ಆಡಳಿತದಲ್ಲಿ ರದ್ದು ಪಡಿಸಲಾಗಿದೆಯೆಂಬುದನ್ನು ಸ್ವಲ್ಪ ಜ್ಞಾಪಕದಲ್ಲಿಟ್ಟುಕೊಳ್ಳಲಿ, ಎಂದು ನಾನು ಹೇಳುವುದಷ್ಟೆ, ಇನ್ನು ಬೇರೆ ಏನೂ ಇಲ್ಲ. ಇಲ್ಲಿ 109 ಜನ ಪ್ರಭಾವಿಗಳಿಗೆ ಕೊಟ್ಟಿದ್ದಾರೆಂಬ message ಹೋಗಿದೆಯಲ್ಲಾ? ಅದಕ್ಕೆ ರಾಜ್ಯಪಾಲರೇ ಅಧಿಕಾರದಲ್ಲಿದ್ದಾಗ ಮಾಡಿದ್ದಾರೆನ್ನುವುದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಇನ್ನು ಎರಡನೆಯದಾಗಿ ತಾವು ತೆಲಗಿ ಕೇಸ್ ಬಗ್ಗೆ ಕೇಳುತ್ತಿದ್ದೀರಿ. ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ದಿನಾಂಕ: 08-01-2004 ರಂದು ಸದನದಲ್ಲಿ ನಕಲಿ ಛಾಪಾ ಕಾಗದದ ಹಗರಣಕ್ಕೆ ಸಂಬಂಧಪಟ್ಟಂತೆ ಚರ್ಚಿಸುವಾಗ ನಕಲಿ ಛಾಪಾ ಕಾಗದದ ಆರೋಪಿ ಕರೀಂಲಾಲ್ ತೆಲಗಿ ಅವರಿಂದ ಪಡೆದ 100 ಕೋಟಿ ರೂಪಾಯಿಗಳನ್ನು ಕರ್ನಾಟಕ ನಿವೃತ್ತ DIG, Indian Oil Corporation ಮಾಜಿ ಅಧ್ಯಕ್ಷರು, J.L.Zutshi ಹಾಗೂ ಸುರೇಶ್ ಮಾಥೂರ್ C M D , Of Petronet LNG Ltd., ಇವರು Gem & Pearl Limited ಹಾಗೂ 8 ಸಂಸ್ಥೆಗಳು ಅದರಲ್ಲಿ ಬಂಡವಾಳವನ್ನು ಹೂಡಿರುತ್ತಾರೆಂದು ಒಬ್ಬ DIG ಮೇಲೆ ಅಪಾದನೆಯನ್ನು ಮಾಡುತ್ತಾರೆ. ದಿನಾಂಕ:08.01.2004ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಆಗ ವಿರೋಧಪಕ್ಷದ ನಾಯಕರಾಗಿದ್ದಾಗ ವಿಧಾನ ಪರಿಷತ್ತಿನಲ್ಲಿ ಒಂದು ಆಪಾದನೆಯನ್ನು ಮಾಡಿದರು. ಈ ಆಪಾದನೆಯನ್ನು ಮಾಡಿದ ಮೇಲೆ ಆ DIGಯವರು ಇಲ್ಲೇ ಇರುತ್ತಾರೆ. ನಿವೃತ್ತ DIGಯವರು ರೇವಣ್ಣ ಸಿದ್ದಯ್ಯನವರು ನನಗೆ ಹಕ್ಕುಚ್ಯುತಿಯಾಗಿ ದೆಯೆಂದು ಹಕ್ಕು ಬಾಧ್ಯತಾ ಸಮಿತಿಗೆ ಹಾಕುತ್ತಾರೆ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿ ನಗರ) :- ಮಾನ್ಯ ಉಪಾಧ್ಯಕ್ಷರೆ, ನನ್ನದು ಒಂದು point of order ಇದೆ. ಅವರು ಎದ್ದಾಗೆಲ್ಲಾ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡತ್ತೀರಿ. ಈಗ ಅವರು 2004ರ ವಿಚಾರವನ್ನು ಮಾತನಾಡುತ್ತಿದ್ದಾರೆ.

(ಗೊಂದಲ)

ಮಾನ್ಯ ರೇವಣ್ಣನವರೇ, ನಾನು ನಿಮಗಿಂತ ಮೊದಲು ಈ ವಿಧಾನ ಸಭೆಗೆ ಬಂದಿದ್ದೇನೆ. ನಾನು ಬಂದ ಮೇಲೆ ನೀವು ವಿಧಾನ ಸೌಧಕ್ಕೆ ಬಂದಿರುವುದು. ನಾನು ನಿಮ್ಮಿಂದ ಕಲಿತುಕೊಳ್ಳಬೇಕಾದಂಥ ಅವಶ್ಯಕತೆ ಇಲ್ಲ. ಇವರು 2004ನೇ ಇಸವಿಯ ವಿಚಾರವನ್ನು ಇಲ್ಲಿ ಮಾತನಾಡುತ್ತಿದ್ದಾರೆ. 1986,1987,1989 ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ದೇವೇಗೌಡರ ಕಾಲದಲ್ಲಿ ಚರ್ಚೆಯಾಗಿರುವುದನ್ನು ಈಗ ನಾನು ಪ್ರಸ್ತಾಪ ಮಾಡಲೇ? ಹಿಂದೆ ಆಗಿರುವಂಥ ಚರ್ಚೆಯನ್ನು ಇಲ್ಲಿ ನಾನು ತೋರಿಸುತ್ತೇನೆ. ಇಲ್ಲಿ ಇಷ್ಟು ಹೊತ್ತು ಮಾನ್ಯ ಮುಖ್ಯಮಂತ್ರಿಯವರು ನೇರವಾಗಿ ಉತ್ತರವನ್ನು ಕೊಟ್ಟಿದ್ದಾರೆ. 2004ರಲ್ಲಿ ಛಾಪಾ ಕಾಗದದ ಹಗರಣ ಬಂತು. ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ, ನಾವು ಹಿಂದಿನ ಹಗರಣವನ್ನು ತೆಗೆಯೋಣವೇ? ನಾವು ತೆಗೆಯುವುದಿಲ್ಲ, ಏಕೆಂದರೆ ನಾನು 25 ವರ್ಷಗಳ ಕಾಲ 1983 ರಿಂದ ನಾಲ್ಕು ಬಾರಿ ಎಂ.ಎಲ್.ಎ. ಆಗಿದ್ದೆ, ಲೋಕಸಭಾ ಸದಸ್ಯನಾಗಿದ್ದೆ. ನಾನು ಏನು ಮಾತನಾಡಬೇಕೋ ಅದನ್ನೇ ಮಾತನಾಡುತ್ತೇನೆ. ನೀವು ಹಿಂದಿನದನೆಲ್ಲಾ ತೆಗೆದರೆ, ನಾವು ವಿಷಯಗಳನ್ನು ತೆಗೆಯೋಣವೇ? ನಿಮ್ಮದೂ ಬೇಕಾದಷ್ಟು ವರದಿಗಳು ಪುಸ್ತಕಗಳು ಬಂದಿವೆ. ಮೂರು ಎಕರೆ, 12 ಕುರಿಗಳಿತ್ತು, ಆವಾಗ ಎಷ್ಟು ಕೋಟಿ ಇತ್ತೆಂಬುದೆಲ್ಲಾ ನಿಮ್ಮ ಮೇಲೆ ವರದಿಗಳು ಬಂದಿಲ್ಲವಾ? ನಾನು ಆ ಎಲ್ಲಾ ವಿಷಯಗಳನ್ನು ತೆಗೆಯಲಾ? ಇದು ಬೇಡ. ಇದನ್ನು ಇಲ್ಲಿಗೆ ಮುಕ್ತಾಯ ಮಾಡಿ. ಈ ರಾಜ್ಯಕ್ಕೆ, ಜನಕ್ಕೆ ನಾವು ಏನು ಬೇಕಾದರೂ ಮಾಡೋಣ. ಹಿಂದಿನ ವಿಷಯಗಳನ್ನೆಲ್ಲ ತೆಗೆದರೆ, ನಾನು ತೆಗೆಯುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :- ತೆಗೆಯಿರಿ, ಸ್ವಾಮಿ.

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿ ನಗರ) :- ನನ್ನದು ಏನಾದರೂ ವಿಷಯವಿದ್ದರೆ ತೆಗೆಯಿರಿ. ಒಂದೊಂದಕ್ಕೂ ಪ್ರಶ್ನೆಯನ್ನು ಹಾಕುತ್ತೀರಾ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಉಪಾಧ್ಯಕ್ಷರೆ, ...

ಉಪಾಧ್ಯಕ್ಷರು :- ಮಾನ್ಯ ಬಾಲಕೃಷ್ಣರವರೆ, please..

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಉಪಾಧ್ಯಕ್ಷರೆ, ನೀವು ಅವರಿಗೆ ಅವಕಾಶವನ್ನು ಕೊಡುತ್ತೀರಿ.ಅವರು ಏನೋ ವಿಷಯವನ್ನು ತೆಗೆಯುತ್ತೇನೆಂದು ಹೇಳುತ್ತಿದ್ದಾರೆ, ಅವರಿಗೆ ಹೇಳಿ.

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿ ನಗರ) :- ಮಾನ್ಯ ಉಪಾಧ್ಯಕ್ಷರೆ, ಇವತ್ತು ಯಾರೂ ಯಾರ ಮೇಲೆ ಗೌರವವನ್ನು ತೆಗೆಯುವುದಕ್ಕೆ ನಾನು ತಯಾರಿಲ್ಲ. ನಾನು ಯಾರ ಮೇಲೂ ಸುಳ್ಳು ಆಪಾದನೆ ಮಾಡುವುದಕ್ಕೆ ತಯಾರಿಲ್ಲ. ಆದರೆ ಇವತ್ತು ನಾನು ಸದನದಲ್ಲಿ ಸುಮ್ಮನೆ ಒಂದೊಂದನ್ನು ಕೆದಕಿಕೊಂಡು ಹೋಗುವುದಕ್ಕಿಂತ, ಈಗ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟರು.

ಅದಾದ ಮೇಲೆ, 2004ರಲ್ಲಿ ಆದಂಥ ಛಾಪಾ ಕಾಗದದ ಹಗರಣವನ್ನು ನೀವು ತೆಗೆಯುತ್ತಿದ್ದೀರಲ್ಲ? ಈಗ ಅದು ಬರಬೇಕೇ? ನೀವು ಅದನ್ನು ತೆಗೆದರೆ, ನಾವೂ ಹಿಂದಿನದೆಲ್ಲ ತೆಗೆಯುತ್ತೇವೆ. ಅದು ಬೇಡ. ನನಗೆ ಸನ್ಮಾನ್ಯ ದೇವೇಗೌಡರ ಮೇಲೆ ಅಪಾರ ಗೌರವವಿದೆ. ಅವರು ಪ್ರಧಾನ ಮಂತ್ರಿಗಳಾಗಿದ್ದಂಥವರು, ಅವರ ಮೇಲೆ ನನಗೆ ಗೌರವವಿದೆ. ಆದರೆ ಕಳೆದ ಮೂರು ದಿವಸಗಳಿಂದ ನೀವು ಏನು ಮಾಡುತ್ತಿದ್ದೀರಿ? ಬೆಳಗಾವಿಯ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯನ್ನು ಮಾಡೋಣ ಎಂದು ಹೇಳಿದರೆ ಅದಕ್ಕೆ ಅವಕಾಶವಿಲ್ಲದಂತೆ, ಮಾತೆತ್ತಿದರೆ ಸಿ.ಬಿ.ಐ., ಮಾತೆತ್ತಿದರೆ ಅದು, ಇದು ಎಂದು ಹೇಳುತ್ತಲೇ ಇದ್ದೀರಿ. ಏನಿದೆ ತೋರಿಸಿ?

ಶ್ರೀ ನೆ.ಲ. ನರೇಂದ್ರಬಾಬು :- ಅದೇನನ್ನೋ ತೆಗೆಯುತ್ತೇನೆ ಎಂದು ಹೇಳುತ್ತಿದ್ದಾರೆ. ತೆಗೆಯಿರಿ ನೋಡೋಣ.

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿ ನಗರ) :- ನಾನು ಯೀಲ್ಡ್ ಆಗಿಲ್ಲ.

ಶ್ರೀ ನೆ.ಲ. ನರೇಂದ್ರಬಾಬು :- Point of Order ನಲ್ಲಿ ಪ್ರಸ್ತಾಪ ಮಾಡಿ ಏನೋ ತೆಗೆಯುತ್ತೇನೆ ಎಂದು ಹೇಳುತ್ತಿದ್ದಾರೆ, ಏನು ತೆಗೆಯುತ್ತೀರೋ ಬೇಗ ತೆಗೆಯಿರಿ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ :- ನಾನು ಹೇಳಿರತಕ್ಕಂಥ ಮಾತು . . . .

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ದೇವೇಗೌಡರು ಈ ಸದನದ ಸದಸ್ಯರಲ್ಲ. ಅವರ ಹೆಸರನ್ನು ಪ್ರಸ್ತಾಪಿಸಿ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿ ನಗರ) :- ನಾನು ಅದಕ್ಕೆ ಉತ್ತರ ಕೊಡುತ್ತೇನೆ. ದೇವೇಗೌಡರ ಮೇಲೆ ನಮಗೆ ಅಪಾರ ಗೌರವವಿದೆ. ಅದೇ ರೀತಿ ರೇವಣ್ಣನವರ ಮೇಲೂ ಗೌರವವಿದೆ, ಕುಮಾರಸ್ವಾಮಿಯವರ ಮೇಲೂ ಗೌರವವಿದೆ. ಪ್ರೊಫೆಸರ್ ವೆಂಕಟಗಿರಿಗೌಡರು ಒಂದು ಪುಸ್ತಕವನ್ನು ಬರೆದು ಈ ರಾಜ್ಯಕ್ಕೆ, ಇಡೀ ಭಾರತ ದೇಶಕ್ಕೇ ಪ್ರಿಂಟ್ ಮಾಡಿಸಿದ್ದರು. ಆ ಪುಸ್ತಕದಲ್ಲಿರುವ ವರದಿಯನ್ನು ಓದಿ ನಾನು ಅದನ್ನು ಹೇಳಿದೆ. 3 ಎಕರೆ, 12 ಕುರಿ ಆಸ್ತಿ ಇತ್ತು ಎನ್ನುವುದು ವೆಂಕಟಗಿರಿಗೌಡರು ಬರೆದಿರತಕ್ಕಂಥ ಪುಸ್ತಕದಲ್ಲಿ ಇದೆ. ಅವರು ಪಾರ್ಲಿಮೆಂಟ್ ಮೆಂಬರ್ ಆಗಿದ್ದರು. ಅದನ್ನು ನೋಡಿ ನಾನು ಹೇಳಿದೆ. ನೀವು 2004ರ ಛಾಪಾ ಕಾಗದದ ಹಗರಣವನ್ನು ಎತ್ತಿದರೆ ನಾನೂ ಅದನ್ನು ತೆಗೆಯಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ನೆ.ಲ. ನರೇಂದ್ರಬಾಬು :- ಅನಾವಶ್ಯಕವಾಗಿ ತೆಗೆಯುತ್ತೇವೆ, ತೆಗೆಯುತ್ತೇವೆ ಎನ್ನುತ್ತಿದ್ದಾರೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೇ, ಅವರ Point of Order ಮೇಲೆ ರೂಲಿಂಗ್ ಕೊಡಿ.

ಶ್ರೀ ದಿನೇಶ್ ಗುಂಡೂರಾವ್ :- ಅದರ ಮೇಲೆ ರೂಲಿಂಗ್ ಕೊಡಿ.

Dr. Sharana Prakash Rudrappa Patil :- What is the Ruling on the Point of Order?

ಉಪಾಧ್ಯಕ್ಷರು :- ಏನು Point of Order? ಯಾವುದರ ಬಗ್ಗೆ ಕೇಳುತ್ತಿದ್ದೀರಿ?

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅವರು Point of Order ಮೇಲೆಯೇ ಮಾತನಾಡಿದ್ದು, ಅದರ ಬಗ್ಗೆ ರೂಲಿಂಗ್ ಕೊಡಿ. ಅವರು Point of Order ಮೇಲೆ ಮಾತನಾಡಿದರು. ಯಾವ point ಮೇಲೆ raise ಮಾಡಿದರು ಅದರ ಬಗ್ಗೆ ರೂಲಿಂಗ್ ಕೊಡಿ. ನೀವು ಅವರಿಗೆ raise ಮಾಡುವುದಕ್ಕೆ ಅವಕಾಶ ಕೊಟ್ಟಿರಿ. ಅದರ ಮೇಲೆ ಈಗ ರೂಲಿಂಗ್ ಕೊಡಿ.

(ಗೊಂದಲ)

ಉಪಾಧ್ಯಕ್ಷರು :- ಅವರು Point of Order ಎಂದು ಹೇಳಲಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅವರು Point of Order ಮೇಲೆಯೇ ಮಾತನಾಡಿದ್ದು, ಕಡತವನ್ನು ತೆಗೆದು ನೋಡಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಕಡತವನ್ನು ತೆಗೆಸಿ ನೋಡಿ. XXX XXX XXX XXX XXX

(ಗೊಂದಲ)

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಈ ರೀತಿ ಆದರೆ ಆಗುವುದಿಲ್ಲ. ಸದನವನ್ನು ನಿಯಮಾನುಸಾರ ನಡೆಸಬೇಕಾಗುತ್ತದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ನಿಮ್ಮ ದ್ವೇಷ ತೀರಿಸಿಕೊಳ್ಳುವುದಕ್ಕೆ ಈ ರೀತಿ ಈ ಸದನವನ್ನು ಉಪಯೋಗ ಮಾಡಿಕೊಳ್ಳಬೇಡಿ.

XXX ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಕಡತ ತೆಗೆಸಿ ನೋಡಿ ಸ್ವಾಮಿ.

ಶ್ರೀ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :- Point of Order ಮೇಲೆ ನೀವು ರೂಲಿಂಗ್ ಕೊಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಏನು ಆಪಾದನೆಗಳಿವೆಯೋ ಅವೆಲ್ಲವನ್ನೂ ಮಾಡಿಕೊಳ್ಳಿ, ನಾವೇನೂ ಬೇಡ ಎನ್ನುವುದಿಲ್ಲ. ತೆಲಗಿ ಬಗ್ಗೆ ಮಾತನಾಡುವುದರಿಂದ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೆ. ತೆಲಗಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ 8-1-2004 ರಲ್ಲಿ 100 ಕೋಟಿ ರೂಪಾಯಿಗಳಿಗೆ ಸಂಬಂಧಿಸಿದಂತೆ ಒಬ್ಬ D.I.G. ಮೇಲೆ ಯಡಿಯೂರಪ್ಪನವರು ಒಂದು complaint ಕೊಡುತ್ತಾರೆ. ಅದಾದ ಮೇಲೆ ಸದನದ ಕಾರ್ಯದರ್ಶಿಗಳಾದ ಜಯಶಂಕರಮೂರ್ತಿಯವರು ದಿನಾಂಕ 15-4-2004 ರಂದು, ಸನ್ಮಾನ್ಯ ಯಡಿಯೂರಪ್ಪನವರಿಗೆ ಒಂದು ನೋಟಿಸ್ ಕೊಟ್ಟು, ನೀವು ಮಾಡಿರುವ 100 ಕೋಟಿ ರೂಪಾಯಿಗಳ ಆಪಾದನೆಗೆ ಸಂಬಂಧಪಟ್ಟಂತೆ ನಿಮ್ಮ ಹತ್ತಿರ ಏನಾದರೂ ದಾಖಲಾತಿಗಳಿದ್ದರೆ ತೆಗೆದುಕೊಂಡು ಬಂದು ಕೊಡಿ ಎಂದು ಹೇಳುತ್ತಾರೆ. ನಂತರ ದಿನಾಂಕ 19-5-2004 ರಂದು, ಅದೇ ಜಯಶಂಕರಮೂರ್ತಿಯವರು ಮತ್ತೆ ಇನ್ನೊಂದು ನೋಟಿಸ್ ಕೊಡುತ್ತಾರೆ.

(ಗೊಂದಲ)

ಉಪಾಧ್ಯಕ್ಷರು :- ದಯವಿಟ್ಟು ಬೇಗ ಮುಗಿಸಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಅವರು ಹೇಳಿದುದನೆಲ್ಲಾ ನಾವು ಕೇಳಲಿಲ್ಲವೇ? ಕುಮಾರಸ್ವಾಮಿಯವರ ಮೇಲೆ ಹೇಳಿದರು, ಧರಂಸಿಂಗ್‌ರವರ ಮೇಲೆ ಹೇಳಿದರು, ಹೀಗೆ ಎಲ್ಲರ ಮೇಲೆ ಹೇಳಿದ್ದಾರೆ. ನಾವು ಅದನ್ನು ಕೇಳುತ್ತಾ ಕುಳಿತಿಲ್ಲವೇ? ದಯಮಾಡಿ ಒಂದು ಸ್ವಲ್ಪ ತಾಳ್ಮೆಯಿಂದ ಇರಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಏಕೆ ಇವರು ಈ ರೀತಿ ಮಾಡುತ್ತಾರೆ? ಇವರಿಗೆ ಏನಾಯಿತು?

ಉಪಾಧ್ಯಕ್ಷರು :- ಅದಕ್ಕೇ ಹೇಳಿದ್ದು, ನೀವು ಬೇಗ ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ :- ಅವರ ಮುಖ್ಯಮಂತ್ರಿಗಳಿಗೆ ಎದುರಿಸುವ ಶಕ್ತಿ ಇದೆ. ಏಕೆ ಹೀಗೆ ಮಾಡುತ್ತಾರೆ?

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿ ನಗರ) :- ತೆಲಗಿ ಸ್ಟ್ಯಾಂಪ್ ಪೇಪರ್ ಹಗರಣದಲ್ಲಿ ಜೈಲಿನಲ್ಲಿದ್ದಾನೆ. ಈಗ ಅವನ ವಿಚಾರ ಏಕೆ ಇಲ್ಲಿ?

ಶ್ರೀ ಹೆಚ್.ಡಿ. ರೇವಣ್ಣ :- ನಾನು ತೆಲಗಿ ಬಗ್ಗೆ, ... ಒಂದೆರಡು ನಿಮಿಷ ಸ್ವಾಮಿ.

ಉಪಾಧ್ಯಕ್ಷರು :- ದಯವಿಟ್ಟು ನೀವು ಕ್ಲಾರಿಫಿಕೇಷನ್ ಏನಾದರೂ ಇದ್ದರೆ ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ:- ದಯಮಾಡಿ ಅವಕಾಶ ಕೊಡಿ, ನಾನು ಸ್ವಲ್ಪ ವಿಷಯ ಹೇಳಬೇಕಾಗುತ್ತದೆ. ನಾನೂ ಸದಸ್ಯ. ನನಗೂ ಸ್ವಲ್ಪ ಅವಕಾಶ ಕೊಡಿ.

ಉಪಾಧ್ಯಕ್ಷರು :- ಮುಖ್ಯಮಂತ್ರಿಗಳ ಉತ್ತರಕ್ಕೆ ಕ್ಲಾರಿಫಿಕೇಷನ್‌ಗೆ ಮಾತ್ರ ಅವಕಾಶವಿದೆ.

ಶ್ರೀ ಹೆಚ್.ಡಿ. ರೇವಣ್ಣ :- ದಿನಾಂಕ 19-5-2004 ರಂದು ಕೊಡುತ್ತಾರೆ. ಅದಕ್ಕೆ 12ನೇ ಆಗಸ್ಟ್ . . .

ಉಪಾಧ್ಯಕ್ಷರು :- ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಬೇರೆಯದಕ್ಕೆ ಅವಕಾಶವಿಲ್ಲ. ಮುಖ್ಯಮಂತ್ರಿಗಳ ಉತ್ತರದಲ್ಲಿ ಏನಾದರೂ ಕ್ಲಾರಿಫಿಕೇಷನ್‌ಗಳಿದ್ದರೆ ದಯವಿಟ್ಟು ಅದನ್ನು ಕೇಳಿ.

ಶ್ರೀ ಹೆಚ್.ಡಿ.ರೇವಣ್ಣ :- ಅದಕ್ಕೋಸ್ಕರವೇ ನಾನು ಹೇಳುವುದು, ತೆಲಗಿ . . . .

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿ ನಗರ) :- ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

ಉಪಾಧ್ಯಕ್ಷರು :- ನೀವು ಕ್ಲಾರಿಫಿಕೇಷನ್‌ಅಷ್ಟೇ ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ :- ಮುಖ್ಯಮಂತ್ರಿಗಳು ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳಿದ್ದಾರೆ. ಹಾಸನ ರಿಂಗ್ ರೋಡ್, K.P.T.C.L. 5 ಸಾವಿರ . . . . .

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿ ನಗರ) :- ತೆಲಗಿ ಈಗಾಗಲೇ ಜೈಲಿನಲ್ಲಿದ್ದಾನೆ. ಅವನ ಪ್ರಶ್ನೆ ಎಲ್ಲಿ ಬರುತ್ತದೆ? ಸ್ಟ್ಯಾಂಪ್ ಪೇಪರ್ ಹಗರಣದಲ್ಲಿ ತೆಲಗಿ ಜೈಲಿನಲ್ಲಿದ್ದಾನೆ. ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಉಮೇಶ್ ವಿ ಕತ್ತಿ :- ಗಣಿ ವಿಷಯದ ಮೇಲೆ ಚರ್ಚೆ ಮಾಡಿ, ಗಣಿ ಮೇಲೆ ಕ್ಲಾರಿಫಿಕೇಷನ್ ಕೇಳಿ. ಅದು ಬಿಟ್ಟು ಹಾಸನ ರಿಂಗ್ ರೋಡ್ ಎಂದೆಲ್ಲಾ ಹೇಳುತ್ತಾ ಹೋದರೆ ಹೇಗೆ? ಹಾಸನ ರಿಂಗ್ ರೋಡ್ ಇಲ್ಲಿ ಏಕೆ ಬರುತ್ತದೆ? ಗಣಿ ವಿಷಯದ ಮೇಲೆ ಮುಖ್ಯಮಂತ್ರಿಗಳು ಹೇಳಿದ ಉತ್ತರಕ್ಕೆ ಕ್ಲಾರಿಫಿಕೇಷನ್ ಕೇಳಿ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿ ನಗರ) :- ತೆಲಗಿ ಜೈಲಿನಲ್ಲಿದ್ದಾನೆ, ಅವನಿಗೆ ಪನಿಷ್‌ಮೆಂಟ್ ಆಗಿದೆ. ಅವನನ್ನು ಕಟ್ಟಿಕೊಂಡು ನೀವು ಇಲ್ಲಿ ಏನು ಮಾಡುತ್ತೀರಿ?

(ಗೊಂದಲ)

ಶ್ರೀ ಉಮೇಶ್ ವಿ ಕತ್ತಿ :- ಗಣಿ ವಿಷಯದ ಮೇಲೆ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅದರ ಮೇಲೆ ನೀವು ಕ್ಲಾರಿಫಿಕೇಷನ್ ಕೇಳಿ.

(ಗೊಂದಲ)

ಉಪಾಧ್ಯಕ್ಷರು :- ದಯವಿಟ್ಟು ಕ್ಲಾರಿಫಿಕೇಷನ್ ಇದ್ದರೆ ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ :- ಅವರಿಗೆ ಒಂದು ಸ್ವಲ್ಪ ಕುಳಿತುಕೊಳ್ಳಲು ಹೇಳಿ.

ಒಬ್ಬ ಮಾನ್ಯ ಸದಸ್ಯರು :- ಸಭೆ ನಡೆಸುವುದು ಈ ರೀತಿಯೇ?

ಉಪಾಧ್ಯಕ್ಷರು :- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿ ನಗರ) :- ಉಪಾಧ್ಯಕ್ಷರೆ, ನಿಮಗೆ ಗೌರವವಾಗಿ ಹೇಳುತ್ತಿದ್ದೇವೆ, ತೆಲಗಿ ವಿಚಾರವನ್ನು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ, ಅವನು ಈಗಾಗಲೇ ಜೈಲಿನಲ್ಲಿದ್ದಾನೆ.

(ಗೊಂದಲ)

ಡಾ॥ ಬಿ.ಎಸ್. ಯಡಿಯೂರಪ್ಪ :- ಲೋಕಾಯುಕ್ತರ ಮೇಲೆ ನಮಗೆ ವಿಶ್ವಾಸ ಇದೆ. ಆದುದರಿಂದ, ಯಾವಯಾವ ವಿಷಯಗಳು ತನಿಖೆಯಾಗಬೇಕು ಎಂದು ಅನ್ನಿಸಿತೋ, ಅವುಗಳೆಲ್ಲವನ್ನೂ ಲೋಕಾಯುಕ್ತರಿಗೆ ವಹಿಸಿದ್ದೇವೆ ಎಂದು ಹೇಳಿದೆನೇ ಹೊರತು ನಿಮ್ಮ ಬಗ್ಗೆ ಬೇರೆ ಏನು ಹೇಳಿದ್ದೇನೆ?

ಶ್ರೀ ಹೆಚ್.ಡಿ. ರೇವಣ್ಣ :- ಅದಕ್ಕೋಸ್ಕರವೇ ಒಂದೆರಡು ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ದಯಮಾಡಿ, ಅವರ ಸದಸ್ಯರುಗಳನ್ನು ತಾಳ್ಮೆಯಿಂದ ಇರಲು ಹೇಳಿ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿ ನಗರ) :- ಸ್ಟ್ಯಾಂಪ್ ಪೇಪರ್ ಹಗರಣದ ತೆಲಗಿ ವಿಚಾರವನ್ನು ಇಲ್ಲಿ ಮಾತನಾಡಲು ಆಗುವುದಿಲ್ಲ. ಅವನು ಜೈಲಿನಲ್ಲಿದ್ದಾನೆ. ಅವನ ಬಗ್ಗೆ ಏಕೆ ಮಾತನಾಡುತ್ತೀರಿ? 2004ರ ವಿಷಯವನ್ನು ಏಕೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಸಿ.ಸಿ. ಪಾಟೀಲ್ :- ಸನ್ಮಾನ್ಯ ಉಪಾಧ್ಯಕ್ಷರೆ, ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗಲಿ. ಉತ್ತರ ಕರ್ನಾಟಕದ ಬಗ್ಗೆ ಚರ್ಚೆಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :- ಉತ್ತರ ಕರ್ನಾಟಕದ ಬಗ್ಗೆ ಚರ್ಚೆಗೆ ಅವಕಾಶ ಕೊಡಿ, ಇಲ್ಲಿ ಬೇರೆಲ್ಲ ವಿಷಯವನ್ನು ಮಾತನಾಡುತ್ತಿದ್ದಾರೆ, ನಮಗೆ ಅವಕಾಶವಿಲ್ಲ, ಒಂದೇ ಸಬ್ಜೆಕ್ಟನ್ನು ಹಿಡಿದುಕೊಂಡು ಇಡೀ ದಿವಸದ ಕಾರ್ಯಕಲಾಪವನ್ನು ತಿಂದಿದ್ದಾರೆ, ನಾಲ್ಕು ದಿವಸಗಳಿಂದ ಒಂದೇ ವಿಷಯ ಚರ್ಚೆಯಾಗುತ್ತಿದೆ ಎಂದು ಹೇಳಿ ಉತ್ತರ ಕರ್ನಾಟಕ ಭಾಗದ ಶಾಸಕರೆಲ್ಲ

ಕೇಳಿಕೊಳ್ಳುತ್ತಿದ್ದಾರೆ. 40-50 ಜನ ಶಾಸಕರು ಮಾತನಾಡಬೇಕೆಂದಿದ್ದಾರೆ. ಇದು ಎಲ್ಲ ಶಾಸಕರ ಕೋರಿಕೆಯಾಗಿದೆ. ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಶಾಸಕರು ಮಾತನಾಡಬೇಕೆಂದಿದ್ದಾರೆ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿ ನಗರ) :- ತೆಲಗಿ ವಿಚಾರದಲ್ಲಿ 100 ಕೋಟಿ ರೂಪಾಯಿ ಗಳ ಹಣಕ್ಕೆ ಸಂಬಂಧಿಸಿದಂತೆ ಒಬ್ಬ ಪೊಲೀಸ್ ಆಫೀಸರ್ ಹೇಳಿದ್ದಾರೆ ಎಂದು ಇಲ್ಲಿ ಹೇಳಲು ಬರುವುದಿಲ್ಲ. ಈಗಾಗಲೇ ಅವನಿಗೆ ಜೈಲು ಆಗಿದೆ. ಆ ಪ್ರಶ್ನೆ ಈಗ ಇಲ್ಲಿ ಎತ್ತುವುದಕ್ಕೆ ಬರುವುದಿಲ್ಲ.

ಶ್ರೀ ಸಿ.ಸಿ. ಪಾಟೀಲ್ :- ಉತ್ತರ ಕರ್ನಾಟಕದ ಬಗ್ಗೆ ಚರ್ಚೆಗೆ ಅವಕಾಶ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ:- ಉತ್ತರ ಕರ್ನಾಟಕದ ಬಗ್ಗೆ ನಮಗೇನೂ ದ್ವೇಷವಿಲ್ಲ ಸ್ವಾಮಿ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ:- ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಮಾತನಾಡಿ ಎಂದು ಮಂತ್ರಿಗಳು ಹೇಳಿದರು. ಆದರೆ ಇದುವರೆಗೂ ನಮಗೆ ಅವಕಾಶವನ್ನೇ ಮಾಡಿಕೊಟ್ಟಿಲ್ಲ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :- ಅದನ್ನು ನಿಮ್ಮ ನಾಯಕರಿಗೆ ಹೇಳಿ. ನಮಗೆ ಏಕೆ ಹೇಳುತ್ತೀರಿ? ಅಲ್ಲಿರುವ ನಿಮ್ಮ deputy leaderಗೆ ಹೇಳಿ.

(ಗೊಂದಲ)

ಉಪಾಧ್ಯಕ್ಷರು :- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ರೇವಣ್ಣನವರೆ, ನೀವು clarification ಬಿಟ್ಟು ಬೇರೆ ಏನೂ ಕೇಳಬೇಡಿ.

(ಗೊಂದಲ)

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ):- ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸುಬ್ರಹ್ಮಣ್ಯ ನಾಯ್ಡುರವರ ಬಗ್ಗೆ ಅಪಾರವಾದ ಗೌರವವಿದೆ ಮತ್ತು ಅವರು ನಮಗೆ ಒಳ್ಳೆಯ ಸ್ನೇಹಿತರು ಕೂಡ. ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಅವರಿಗೆ ಎಷ್ಟು

ಕಳಕಳಿ ಇದೆಯೆಂದರೆ ಇಲ್ಲಿಯ ಕೃಷ್ಣಾ ನದಿ ನೀರನ್ನು ಆಲಮಟ್ಟಿ ಜಲಾಶಯದಿಂದ ಬೆಂಗಳೂರಿಗೆ ತೆಗೆದುಕೊಂಡು ಹೋಗುವ ಯೋಜನೆಯನ್ನು ಮಾಡುತ್ತಿದ್ದಾರಲ್ಲಾ, ಇಲ್ಲಿ ಕುಡಿಯಲಿಕ್ಕೆ ನೀರಿಲ್ಲದೆ ಸಾಯುತ್ತಿದ್ದಾರೆ, ಅಂಥದ್ದರಲ್ಲಿ ಇಲ್ಲಿಂದ ಬೆಂಗಳೂರಿಗೆ ನೀರು ತೆಗೆದುಕೊಂಡು ಹೋಗಬೇಕೆನ್ನುವ statement ಕೊಟ್ಟಿದ್ದಾರೆ. ಅದಕ್ಕೆ, ಉತ್ತರ ಕರ್ನಾಟಕದ ಭಾವನೆ ಏನಿದೆ ಅದನ್ನು ದಯವಿಟ್ಟು ನಮಗೆ ಬಿಟ್ಟುಬಿಡಿ. ನೀವೇನು ಬೆಂಗಳೂರಿಗೆ ಸೀಮಿತವಾಗಿ ಚರ್ಚೆ ಮಾಡಿಕೊಳ್ಳುತ್ತಿದ್ದೀರಿ, ಅದನ್ನು ಮಾಡಿಕೊಳ್ಳಿ. ಆದರೆ, ಅದರ ಬಗ್ಗೆ ನಾವು ಪಾಠವನ್ನು ಕಲಿಯಬೇಕಾಗಿಲ್ಲ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :- ಚರ್ಚೆ ಮಾಡಿ ಎಂದು ಹೇಳಿದ್ದೇವೆ, ಚರ್ಚೆ ಮಾಡಬೇಡಿ ಎಂದು ಹೇಳಿದ್ದೇವೆಯೇ? ಆ ವಿಚಾರವನ್ನೇ ಚರ್ಚೆ ಮಾಡಿ.

(ಗೊಂದಲ)

ಉಪಾಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೆ, ಉತ್ತರ ಕರ್ನಾಟಕದ ಬಗ್ಗೆ ನನ್ನದೇನಿಲ್ಲ.

ಉಪಾಧ್ಯಕ್ಷರು :- ದಯವಿಟ್ಟು ಕ್ಲಾರಿಫಿಕೇಷನ್ ಕೇಳಿ. ಉತ್ತರ ಕರ್ನಾಟಕದ್ದು ಬೇಡ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ದಯವಿಟ್ಟು ಎಲ್ಲರಿಗೂ ಕುಳಿತುಕೊಳ್ಳುವುದಕ್ಕೆ ಹೇಳಿ.

(ಗೊಂದಲ)

ಉಪಾಧ್ಯಕ್ಷರು :- ರೇಣುಕಾಚಾರ್ಯರವರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ :- ಈ ರಾಜ್ಯದ ಅಭಿವೃದ್ಧಿ ಬಗ್ಗೆ ನಿಮ್ಮ ಚಿಂತನೆ ಇಲ್ಲ. ಕಾಳಜಿ ಇಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಅವರು ಮುಖ್ಯಮಂತ್ರಿಯವರು ಹೇಳಿರುವುದಕ್ಕೆ ಹೇಳುತ್ತಿದ್ದೇನೆ, ನೀವು ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು :- ಬೇರೆ ಯಾವುದೂ ಬೇಡ, ನೀವು ಕ್ಲಾರಿಫಿಕೇಷನ್ ಕೇಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೆ. . . .

ಒಬ್ಬ ಮಾನ್ಯ ಸದಸ್ಯರು :- ಗೌರವಾನ್ವಿತ ರೇವಣ್ಣನವರೆ, ಅದೇನು ಹೇಳಬೇಕೋ, ಅದನ್ನು ಬೇಗ ಹೇಳಿ ಮುಗಿಸಿ. ಬೇರೆ ವಿಷಯ ಚರ್ಚೆ ಮಾಡೋಣ.

(ಗೊಂದಲ)

ಉಪಾಧ್ಯಕ್ಷರು :- ದಯವಿಟ್ಟು ಬೇಡ, ಅಪ್ಪಚ್ಚು ರಂಜನ್‌ರವರೆ ಕುಳಿತುಕೊಳ್ಳಿ. ನೀವು ಕ್ಲಾರಿಫಿಕೇಷನ್ ಕೇಳುವುದು ಬಿಟ್ಟು ಇನ್ನಿತರ ವಿಷಯಗಳ ಬಗ್ಗೆ ಮಾತನಾಡಬೇಡಿ. ನೀವು ಬೇಗ ಮಾತನಾಡಿ ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ :- ಉತ್ತರ ಕರ್ನಾಟಕದ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರು ಮಾತನಾಡಲಿ. ಆಮೇಲೆ, ನಾನು ಮಾತನಾಡುತ್ತೇನೆ.

ಉಪಾಧ್ಯಕ್ಷರು :- ಬೇಗ ಮಾತನಾಡಿ ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ :- ಹಾಸನ ರಿಂಗ್ ರೋಡ್‌ಗೆ . . . .

ಉಪಾಧ್ಯಕ್ಷರು :- ನೀವು ಕ್ಲಾರಿಫಿಕೇಷನ್ ಕೇಳಿ ಎಂದರೆ, ಇನ್ನೇನೋ ಹೇಳುತ್ತಿದ್ದೀರಿ. ಹಾಸನದ ರಿಂಗ್ ರೋಡ್ ಅದರ ಬಗ್ಗೆ ಅವರೇನೂ ಹೇಳಲಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಅವರು ಹೇಳಿದ್ದಾರೆ ಸಾರ್.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ಗಣಿ ಉದ್ಯಮದ ಬಗ್ಗೆ ಏನು ಅಭಿಪ್ರಾಯವಿದೆ ಅದರ ಬಗ್ಗೆ ಚರ್ಚೆಯಾಗಲಿ. ಬೇರೆ ವಿಷಯ ಬೇಡ.

(ಗೊಂದಲ)

ಶ್ರೀ ಎಂ. ಚಂದ್ರಪ್ಪ :- ಗಣಿ ವಿಷಯ ಲೋಕಾಯುಕ್ತಕ್ಕೆ ರೆಫರ್ ಆಗಿದೆ. (ಗೊಂದಲ) ಲೋಕಾಯುಕ್ತದಲ್ಲಿ ತನಿಖೆ ನಡೆಯುತ್ತಿದೆ.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ :- ನಾವೂ ಆಯ್ಕೆಯಾಗಿ ಬಂದಿದ್ದೇವೆ. ನಮ್ಮ ಕ್ಷೇತ್ರದ ಜನ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ. ನಮಗೂ ಅವಕಾಶ ಕೊಡಿ. ಬೇಡದ ವಿಷಯದ ಬಗ್ಗೆ ಚರ್ಚೆ ಮಾಡಿ ಸದನದ ಸಮಯವನ್ನು ಹಾಳು ಮಾಡುವುದು ಬೇಡ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಯಾರಾರು ಯಾವ ಏಜೆನ್ಸಿಗೆ administrative sanction ಕೊಟ್ಟಿದ್ದಾರೆ ಮತ್ತು 100 ಕೋಟಿ ರೂ.ಗಳ contract ಅನ್ನು approve ಮಾಡಬೇಕಾದರೆ, ಹಣಕಾಸು ಇಲಾಖೆಗೆ ಹೋಗಿ ಅದಕ್ಕೆ ಹಣಕಾಸಿನ ಮಂತ್ರಿಯವರೇ ಅನುಮತಿ ಕೊಟ್ಟಿದ್ದಾರೆ. ಅದರಲ್ಲಿ ನನ್ನ ಜೊತೆಗೆ ಅವರೂ involve ಆಗಿದ್ದಾರೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ, ಆ contract agency ಗೆ ಅವರೇ ಅನುಮತಿ ಕೊಟ್ಟಿರುವುದರಿಂದ ಅದರಲ್ಲಿ ಅವರದೂ ಭಾಗ ಇದೆ ಎಂದು ಹೇಳಬೇಕಾಗುತ್ತದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ನೇರವಾಗಿ ವಿಷಯಕ್ಕೆ ಬರಲಿ. ಅದು ಬಿಟ್ಟು, ಅವರು Finance Minister ಆಗಿದ್ದರಂತೆ ಎಂದು ಮಾತನಾಡುವುದು ಬೇಡ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಇವರೇಕೆ ಇಷ್ಟು ಮಾತನಾಡುತ್ತಿದ್ದಾರೆಂದು ಗೊತ್ತಿಲ್ಲ. ನಾನೇನಾದರೂ ತಪ್ಪು ಮಾಡಿದ್ದರೆ ನಾನು ಜೈಲಿಗೆ ಹೋಗುವುದಕ್ಕೆ ರೆಡಿ ಇದ್ದೇನೆ. ಪಾಪ, ಇವರೆಲ್ಲ ಏಕೆ ಹೀಗೆ ಅಡಚಣೆ ಮಾಡುತ್ತಾರೆ? (ಗೊಂದಲ) ಸನ್ಮಾನ್ಯ

ಮುಖ್ಯಮಂತ್ರಿಯವರು ಈ ಸಭೆಯಲ್ಲಿ ಅದನ್ನು ಉಪಯೋಗಿಸಿದ್ದಕ್ಕೆ ಅದಕ್ಕೆ ನಾನು ಕ್ಲಾರಿಫಿಕೇಷನ್ ಕೊಡುವುದು ನನ್ನ ಧರ್ಮ. ಏಕೆಂದರೆ, ನಾನೊಬ್ಬ ಶಾಸಕನಾಗಿ ನನ್ನ. . . .

(ಗೊಂದಲ)

ಉಪಾಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವ ಸಂದರ್ಭದಲ್ಲಿ ಕೆಲವು ಘಟನೆಗಳನ್ನು ಹೇಳಿದ್ದಾರೆ. ಈ ರಾಜ್ಯದಲ್ಲಿ ಯಾವ್ಯಾವ ರೀತಿ contract ಆಯಿತು, ಏನೇನಾಯಿತು, estimate 100 ಕೋಟಿ ರೂ. ಇದ್ದಿದ್ದು 200 ಕೋಟಿ ರೂ. ಆಗಿದೆ. ಒಂದು ಉದಾಹರಣೆ ಕೊಡುತ್ತೇನೆ ಅದಕ್ಕೆ ಮುಖ್ಯಮಂತ್ರಿಯವರು ಕ್ಲಾರಿಫಿಕೇಷನ್ ಕೊಡಬೇಕು. Latest ಆಗಿ ಅವರು ಮುಖ್ಯಮಂತ್ರಿಯಾದ ಮೇಲೆ ದಿನಾಂಕ 16-12-2007ರಲ್ಲಿ ತುಂಗಭದ್ರಾಕ್ಕೆ ಸಂಬಂಧಿಸಿದಂತೆ 550 ಕೋಟಿ ರೂ.ಗಳ ಟೆಂಡರ್ ಕರೆದರು. Last date of validity of contract 30-08-2008ಕ್ಕೆ ಇತ್ತು. 550 ಕೋಟಿ ರೂ.ಇರುವುದನ್ನು 1036 ಕೋಟಿ ರೂ.ಗೆ ಟೆಂಡರ್ approve ಮಾಡಿದ್ದಾರಲ್ಲ? L-1, 1006 ಕೋಟಿ ರೂ. ಇದ್ದದ್ದನ್ನು ಬಿಟ್ಟು 1036 ಕೋಟಿ ರೂ.ಗೆ last date of validity, Technical Committee 27ನೇ ತಾರೀಖು ಆಯಿತು, ಮೂರೇ ದಿವಸಕ್ಕೆ ಇವರು approval ಮಾಡಿದ್ದಾರಲ್ಲ, 550 ಕೋಟಿ ರೂ. ಇರುವುದನ್ನು 1000 ಕೋಟಿ ರೂ.ಗೆ ಮಾಡಿದ್ದಾರೆ. ಅದೇ 125 ಕೋಟಿ ರೂ. ಇದ್ದದ್ದನ್ನು 400 ಕೋಟಿ ರೂ.ಗೆ ಮಾಡಿದ್ದಾರೆ. ಬೇಕಾದರೆ ನನ್ನದೂ ಸೇರಿಸಿ. ಲೋಕೋಪಯೋಗಿ ಇಲಾಖೆಯಲ್ಲಿ ಏನೇನು ನಡೆದಿದೆ ಎಲ್ಲವನ್ನೂ ಸೇರಿಸಿ, ಇವರದೇನಿದೆ ಅದನ್ನೂ ತನಿಖೆ ಮಾಡಿಸಿ ಎರಡನ್ನೂ ಒಟ್ಟಿಗೆ ಸೇರಿಸಿ ತನಿಖೆ ಮಾಡುವುದಕ್ಕೆ ಹೇಳಿ, ನಾನು ರೆಡಿ ಇದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅವರಿಬ್ಬರದೂ ಇನ್ನೊಮ್ಮೆ ನೋಡೋಣ. ಸದ್ಯಕ್ಕೆ ಗಣಿ ವಿಚಾರದ ಬಗ್ಗೆ ನಾನು CBI enquiry ಮಾಡಬೇಕೆಂದು ಕೇಳಿದ್ದೇನೆ. ಅದಕ್ಕೆ ಒಪ್ಪದಿದ್ದರೆ, ನಾವು ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಧರಣಿ ಮಾಡಲು ಸದನದ ಬಾವಿಗೆ ಆಗಮಿಸಿದರು)

ಉಪಾಧ್ಯಕ್ಷರು :- ಇಲ್ಲಿ ಒಂದು ಪ್ರಕಟಣೆ ಇದೆ. ಅದನ್ನು ಓದುತ್ತೇನೆ.

ಪ್ರಕಟಣೆ

ಉಪಾಧ್ಯಕ್ಷರು :- ಈ ದಿನ ರಾತ್ರಿ ಸನ್ಮಾನ್ಯ ಮುಖ್ಯಮಂತ್ರಿಯವರು ತಮ್ಮ ಗೌರವಾರ್ಥ ಜೆಎನ್‌ಎಂಸಿಯ ಎದುರುಗಡೆ ಸಂಗೀತ ಕಾರಂಜಿ ಉದ್ಯಾನದಲ್ಲಿ ಔತಣಕೂಟವನ್ನೇರ್ಪಡಿಸಿರುತ್ತಾರೆ. ಅದರಲ್ಲಿ ತಾವುಗಳು ಭಾಗವಹಿಸಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಯವರು ಕೋರಿದ್ದಾರೆ.

ಉಪಾಧ್ಯಕ್ಷರು :- ಈಗ ಸದನವನ್ನು ನಾಳೆ ಬೆಳಗ್ಗೆ 10-30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 8 ಗಂಟೆ 39 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ : 23-01-2009ರಂದು ಶುಕ್ರವಾರದಂದು ಬೆಳಗ್ಗೆ 10-30 ಗಂಟೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)